₹ 5/-

# ನೇಸರು

## ತಿಂಗಳೋಲೆ

PAGES 20

SEPTEMBER 2024 | Nesaru Tingalole | Vol. XLII - 09




**ಆದಿ ಶಕ್ತಿ ಪೂಜೆಯೇ ನಮ್ಮ ನಾಡಿನ ಬೇರು**

**ಮೈಸೂರು ಅಸೋಸಿಯೇಷನ್ ಮುಂಬೈ**

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

# ಅಸೋಸಿಯೇಷನ್ನಿನಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ (ದೇವರನಾಮ, ಭಾವಗೀತೆ, ಜಾನಪದ ಗೀತೆ) ಸ್ಪರ್ಧೆ



ಮೈಸೂರು ಅಸೋಸಿಯೇಷನ್ ಪ್ರತೀ ವರ್ಷದಂತೆ ಈ ಬಾರಿಯೂ ಯುವ ಕಲಾವಿದರಿಗಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆಯನ್ನು ಅಗಸ್ಟ್ 25, 2024ರಂದು ಹಾಗೂ ಸುಗಮ ಸಂಗೀತ ಸ್ಪರ್ಧೆ (ದೇವರನಾಮ, ಭಾವಗೀತೆ, ಜನಪದ ಗೀತೆ) ಯುನ್ನು 01-09-2024ರಂದು ಅಸೋಸಿಯೇಷನ್ನಿನ ಗ್ರಂಥಾಲಯ ಮತ್ತು ಕಾನ್ಫರೆನ್ಸ್ ಹಾಲಿನಲ್ಲಿ ಏಳರಿಂದ ಇಪ್ಪತ್ತು ವರ್ಷದವರೆಗಿನ ಮಕ್ಕಳಿಗಾಗಿ ಏರ್ಪಡಿಸಲಾಯಿತು. ಶ್ರೀಮತಿ ವಿದುಷಿ ಭಾನುಮತಿ ಶರ್ಮಾ, ಶ್ರೀಮತಿ ವಿದುಷಿ ಸಂಗೀತಾ ಗಣೇಶನ್, ಶ್ರೀಮತಿ ವಿದುಷಿ ಅನುಪಮಾ ದೇವರಾಜನ್, ಶ್ರೀಮತಿ ವಿದುಷಿ ಹೇಮಾಮಾಲಿನಿ ಅರುಣ್, ಶ್ರೀಮತಿ ಅಹಲ್ಯಾ ನೇಮಿರಾಜ್, ಶೀಮತಿ ಅರ್ಚನಾ ಪ್ರಭು, ಶ್ರೀಮತಿ ಮಮತಾ ಶೆಟ್ಟಿ, ಶ್ರೀಮತಿ ಪುಷ್ಪಲತಾ ಗೌಡ, ಶ್ರೀಮತಿ ಜ್ಯೋತಿ ಉಡುಪ, ಶ್ರೀ ಫಲ್ಗುಣ ರುದ್ರಪಟ್ಟಣ ಇವರು ವಿಜೇತರನ್ನು ಆರಿಸಲು ಸಹಕರಿಸಿದರು. ವಿಜೇತರ ಪಟ್ಟಿ ಕೆಳಕಂಡಂತಿದೆ.





ವಿಜೇತರೆಲ್ಲರಿಗೂ ಮೈಸೂರು ಅಸೋಸಿಯೇಷನ್ನಿನ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು, ಹಾಗೂ ಈ ಸ್ಪರ್ಧೆಯಲ್ಲಿ ಭಾಗವಹಿಸಿದವರೆಲ್ಲರಿಗೂ ಅಲ್ಲದೆ ಪೋಷಕರಿಗೂ ಧನ್ಯವಾದಗಳು.

## The Mysore Association, Mumbai

### SUGAMA SANGEETA (DEVARANAMA) COMPETITION - 2024

| Group I<br>Age 7 years to 10 years | Group II<br>Age 10 years to 15 years | Group III<br>Age 15 years to 20 years | Prize |
|---|---|---|---|
| Rishab Arvind | Vijayalakshmi Hari Iyer | - | I |
| Anviksha Poojari | Lavya Shetty | - | II |
| Chetan Anvay Vummettala | Sanathan Suraj Thamankar | - | III |
| Swara S. Marnad | Padmaja Lakshmanan | - | Encouragement |
| - | Ayush Shetty | - | Encouragement |

### SUGAMA SANGEETA (JANAPADA) COMPETITION - 2024

| Group I<br>Age 7 years to 10 years | Group II<br>Age 10 years to 15 years | Group III<br>Age 15 years to 20 years | Prize |
|---|---|---|---|
| Saanvi Satish Shetty | Suvrath R.P | Uday Kamble | I |
| Veeksha Shetty | Lavya Shetty | Sanjita Ishwar Gowda | II |
| Swara S. Marnad | Suchit Shetty | Chaitanya Manjunath Shetty | III |
| | Malavika Patil | - | III |

### SUGAMA SANGEETA (BHAVAGEETE) COMPETITION - 2024

| Group I<br>Age 7 years to 10 years | Group II<br>Age 10 years to 15 years | Group III<br>Age 15 years to 20 years | Prize |
|---|---|---|---|
| - | Bhanavi Ashok Shetty | - | I |
| - | Suvrath R.P | - | II |
| - | Sanathan Suraj Thamankar | - | III |
| - | Ria Naik | - | Encouragement |
| - | Krittika Patil | - | Encouragement |

ನೇಸರು ತಿಂಗಳೋಲೆ

ಸಂಪುಟ - 42 ಸೆಪ್ಟೆಂಬರ್- 2024 ಸಂಚಿಕೆ-9

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

\- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ಅಮಾನವೀಯತೆಯ ಪರಮಾವಧಿ



✍ **ಡಾ. ಜ್ಯೋತಿ ಸತೀಶ್**

ಈಗಿನ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದಾಗ, ನಮ್ಮೆಲ್ಲರ ಮುಂದೆ ಈ ಪ್ರಶ್ನೆ ಮೂಡುವುದು ಸಹಜ. ನಮ್ಮ ದೇಶ ಅತ್ಯಂತ ಪುರಾತನವಾದ ಸಂಸ್ಕೃತಿಯನ್ನು ಹೊಂದಿದೆ. ನಮ್ಮ ದೇಶದ ಸಂಸ್ಕೃತಿಯು ಕರುಣೆ, ಅನುಕಂಪ, ವಾತ್ಸಲ್ಯ, ಪರೋಪಕಾರ, ತ್ಯಾಗ ಇಂತಹ ಗುಣಗಳ ತಳಹದಿಯ ಮೇಲೆ ನಿಂತಿದೆ. ಇಂತಹ ತಳಹದಿಯೇ ಅಲ್ಲಾಡಿದರೆ ನಮ್ಮ ದೇಶದ ಪರಿಸ್ಥಿತಿ ಅಲ್ಲೋಲಕಲ್ಲೋಲವಾಗುವುದರಲ್ಲಿ ಸಂಶಯವಿಲ್ಲ. ನಡವಳಿಕೆಯಲ್ಲಿ ಮಾನವೀಯತೆ ಇದ್ದರೆ, ಅವರನ್ನು ಮನುಷ್ಯರು ಎನ್ನಬಹುದು. ಮಾನವೀಯತೆಯ ಗಂಧಗಾಳಿ ಇಲ್ಲದವರಿಗೆ ಮನುಷ್ಯರೆನ್ನಲು ಸಾಧ್ಯವಿಲ್ಲ. ಅಂತಹವರನ್ನು ಮೃಗಗಳಿಗೂ ಹೋಲಿಸುವಂತಿಲ್ಲ. ಅಂತಹ ರಾಕ್ಷಸೀ ಪ್ರವೃತ್ತಿಯ ಜನ ಇಂದು ನಮ್ಮ ನಡುವೆ ಇದ್ದಾರೆ. ಇತ್ತೀಚೆಗೆ ಬಂಗಾಳದಲ್ಲಿ ವೈದ್ಯೆಯೊಬ್ಬರ ಬಲತ್ಕಾರ ಹಾಗೂ ಕೊಲೆಯ ಘಟನೆ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದೆ. ಈ ಘಟನೆಯನ್ನು ಗಮನಿಸಿದ ಪ್ರತಿಯೊಬ್ಬರನ್ನೂ ಕಾಡಿದ್ದು ಇದೇ ಪ್ರಶ್ನೆ. ಏನಾಗಿದೆ ನಮ್ಮ ವ್ಯವಸ್ಥೆಗೆ? ನಮ್ಮ ನಾಗರೀಕತೆ ಎತ್ತ ಸಾಗುತ್ತಿದೆ? ಅಂತ. 2012ರಲ್ಲಿ ನಡೆದ ನಿರ್ಭಯ ಕೇಸ್ ಘಟನೆ ಎಲ್ಲರ ನೆನಪಿನಾಳದಿಂದ ದೂರಸರಿಯುವ ಮುನ್ನವೇ ಬಂಗಾಳದ ಘಟನೆ ಎಲ್ಲರ ಮನಸ್ಸನ್ನು ಮತ್ತೊಮ್ಮೆ ಕದಡುವಂತೆ ಮಾಡಿದೆ.

ಈ ಘಟನೆಗಳು ಸಾಮಾಜಿಕ ಸ್ವಾಸ್ಥ್ಯ ಹದಗೆಟ್ಟಿರುವುದನ್ನು ಬಿಂಬಿಸುತ್ತದೆ. ಜನರಲ್ಲಿ ವಿಶ್ವಾಸ ತುಂಬಿ ಸಾಮಾಜಿಕ ಆರೋಗ್ಯ ಕಾಪಾಡಬೇಕಾದ ಸರಕಾರದ ನಿರ್ಲಕ್ಷ್ಯ ಅಕ್ಷಮ್ಯ. ಕಾನೂನು ಸುವ್ಯವಸ್ಥೆ ದುರವಸ್ಥೆಯಾಗಿದೆ. ಒಂದೆಡೆ ಅಪರಾಧ ಪ್ರಕರಣಗಳು ಎಲ್ಲೆ ಮೀರಿವೆ. ಮತ್ತೊಂದು ಕಡೆ ನೊಂದವರ ನೋವಿಗೆ ಸ್ಪಂದಿಸಬೇಕಾದ ಸರಕಾರ ಕೈಕಟ್ಟಿ ಕುಳಿತಿದೆ. ಜೊತೆಗೆ ಅಪರಾಧದಲ್ಲಿ ಭಾಗಿಯಾದವರನ್ನು ರಕ್ಷಿಸುವ ಕಾರ್ಯವೂ ಭರದಿಂದ ಸಾಗುತ್ತಿದೆ. ಇನ್ನು ಸಾವಿನ ಮನೆಯಲ್ಲಿ ಮತ್ತು ನೊಂದವರ ನೋವು, ಯಾತನೆಯಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವವರೇ ಹೆಚ್ಚು.

ಈ ಸಂದರ್ಭದಲ್ಲಿ ಎಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವ ತನಕ ಟೊಂಕ ಕಟ್ಟಿ ನಿಲ್ಲಬೇಕು. ಸರಕಾರದ ಶಿಕ್ಷೆ ಎಷ್ಟೊಂದು ಕಠೋರವಾಗಿರಬೇಕೆಂದರೆ, ನೋಡಿದವರಿಗೆ ಮೈ ಜುಮ್ಮೆನ್ನಿಸಬೇಕು. ಇನ್ನು ಮುಂದೆ ಆ ಕೃತ್ಯವನ್ನು ಯಾರೂ ಮಾಡಲಿಕ್ಕೆ ಧೈರ್ಯ ಬರಬಾರದು ಹಾಗಿರಬೇಕು. ಇಂತಹ ಕೃತ್ಯಗಳು ಮರುಕಳಿಸದಂತೆ ತಡೆಯಲು ದೃಢ ಮತ್ತು ದೀರ್ಘಾವಧಿ ಕ್ರಮದ ಅಗತ್ಯವಿದೆ. ಈ ವಿಕೃತ ಮನಸ್ಸುಗಳು, ಇನ್ನಷ್ಟೇ ಚಿಗುರಬೇಕಾದ ಹಸುಗೂಸುಗಳನ್ನು ಕೂಡ ತಮ್ಮ ಪೌರುಷಕ್ಕೆ ಬಲಿಕೊಡುವುದನ್ನು ನೋಡಿದರೆ, ಮೈಯ್ಯೆಲ್ಲ ಉರಿಯುತ್ತೆ, ಇಂತವರಿಗೆಲ್ಲ ಸಾಮಾನ್ಯ ಸಾವು ಸಿಗಬಾರದು ಅನಿಸುತ್ತದೆ. ಎಲ್ಲರೂ ಒಗ್ಗಟ್ಟಾಗಿ ಈ ಕೃತ್ಯವನ್ನು ಎಸಗಿದವರಿಗೆ ಶಿಕ್ಷೆಯಾಗುವಂತೆ ಮಾಡಬೇಕು. ಇದನ್ನೆಲ್ಲ ಕೇಳಿ ನಮ್ಮ ಮನಸ್ಸೇ ಇಷ್ಟು ರೊಚ್ಚಿಗೇಳುವಾಗ ಇನ್ನು ಆ ಹೆಣ್ಣುಮಕ್ಕಳ ಮನೆಯವರಿಗೆ ಹೇಗಾಗಿಬೇಡ. ಅವರ ದುಃಖಕ್ಕೆ ಕೊನೆಯೆಲ್ಲಿದೆ. ನೂರಾರು ಕನಸುಗಳನ್ನು ಹೊತ್ತು, ಹೊಟ್ಟೆಗೆ ಬಟ್ಟೆ ಕಟ್ಟಿ ಮಕ್ಕಳನ್ನು ಸಾಕಿ, ದೊಡ್ಡದು ಮಾಡಿರುತ್ತಾರೆ. ಅವರು ಪಟ್ಟ ಪಾಡಿಗೆ ತಕ್ಕ ಪ್ರತಿಫಲ ಸಿಗುವ ಸಮಯಕ್ಕೆ ಆ ಹೆಣ್ಣುಮಕ್ಕಳ ಬದುಕು ಈ ರೀತಿ ಅಂತ್ಯವಾದರೆ, ಹೆತ್ತವರ ನೋವು ಹೇಳತೀರದು. ಆ ನೋವು, ಹತಾಶೆ, ನಿರಾಸೆಯನ್ನು ವ್ಯಕ್ತಪಡಿಸಲು ಯಾವ ಶಬ್ದಗಳಿಲ್ಲ. ಆ ನೋವು ಸ್ವಲ್ಪಮಟ್ಟಿಗಾದರೂ ಕಡಿಮೆಯಾಗಬೇಕಾದರೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲೇಬೇಕು.

ಈಗೀಗ ಚಿಕ್ಕ ಹೆಣ್ಣುಮಕ್ಕಳಿಗೆ ಶಾಲೆಯಲ್ಲೇ ಕಲಿಸಲಾಗುತ್ತದೆ. ಯಾವ ಸ್ಪರ್ಶ ಕೆಟ್ಟದು ಅಂತ (), ಅದರೆ ಅದರೊಂದಿಗೆ ಎಲ್ಲರಿಗೂ ತಮ್ಮ ತಮ್ಮ ಮನೆಯ ಗಂಡುಮಕ್ಕಳಿಗೂ ಕಲಿಸಬೇಕು. ಅನುಮತಿಯಿಲ್ಲದೆ ಯಾವ ಹೆಣ್ಣುಮಕ್ಕಳನ್ನು ಮುಟ್ಟಬಾರದು ಅಂತ. ಈ ಅಮಾನವೀಯತೆಯ ಪರಮಾವಧಿಯನ್ನು ನೋಡಿದರೆ, ನಮ್ಮ ಈ ವ್ಯವಸ್ಥೆ ಎಲ್ಲಿ ಹೋಗಿ ಮುಟ್ಟಬಹುದು ಅಂತ ಮನಸ್ಸು ಕಳವಳಗೊಳ್ಳುತ್ತದೆ. ಇದಕ್ಕೆಲ್ಲ ಆದಷ್ಟುಅ ಬೇಗ ಕಡಿವಾಣ ಬೀಳಲಿ ಎಂದು ಆ ದೇವರಲ್ಲಿ ಪ್ರಾರ್ಥಿಸಬೇಕಷ್ಟೆ.

# ಅವ್ವ



ಡಾ. ಮಂಜುನಾಥ್

ಈಗ ಗೌರಿ ಹಬ್ಬ ಬರ್ತಾ ಇದೆ. ಅದಾದ ಮೇಲೆ ನವರಾತ್ರಿ. ಈ ಎರಡು ಹಬ್ಬಗಳು ನಮ್ಮ ಅವ್ವನನ್ನು ಪ್ರೀತಿಯಿಂದ ಬರಮಾಡಿಕೊಳ್ಳುವ ಹಬ್ಬಗಳಾಗಿವೆ. ಆದರೆ ಈ ಅವ್ವ ಯಾರು ಎಂದರೆ ಯಾರೂ ತಿಳಿಯದವರಾಗಿದ್ದಾರೆ. ಕೆಲವರು ಗೌರಿ, ಕೈಲಾಸದಲ್ಲಿ ತನ್ನ ಗಂಡನ ಮನೆಯಿಂದ ತವರು ಮನೆಗೆ ಬಂದಿದ್ದಾಗಿ ಅವಳ ಮಡಿಲು ತುಂಬಿ ಕಳಿಸುವ ಹಬ್ಬ ಎನ್ನುತ್ತಾರೆ. ಅಷ್ಟೇ. ಆದರೆ ಅವಳ ತವರು ಮನೆ ಇದೇ ಎಂದಾಗ ಅದು ಹೇಗೆ ಎಂದು ಕೇಳಬೇಕಾಗುತ್ತದೆ. ಆದ್ದರಿಂದ ಇದನ್ನು ಸರಿಯಾಗಿ ತಿಳಿಯುವ ದಾರಿಯನ್ನು ಕಾಣಬೇಕು.



ಕೈಲಾಸ ಯಾವುದು, ತವರು ಯಾವುದು ಎಂದಾಗ ತವರು ಮನೆಯನ್ನು ನಾವು ಸರಿಯಾಗಿ ತಿಳಿಯಬೇಕಲ್ಲವೇ? ತವರು ಮನೆಯ ಮಂದಿಯನ್ನು ಯಾರು ಯಾರು ಎಂದು ತಿಳಿಯುವುದು ಮೊದಲ ಹೆಜ್ಜೆ.

ಈ ನಾಡು ಎಲ್ಲಿಯದು? ಮೊಟ್ಟಮೊದಲ ನೆಲ, ಈಗಿನ ಆಫ್ರಿಕಾ ಖಂಡ. ಅಲ್ಲಿ ನೆಲೆಯಾಗಿದ್ದ ಜೀವ ಜಂತುಗಳು ಯಾವುವು? ಅದರಲ್ಲಿ ಬಹಳ ದೊಡ್ಡ ಜಂತು, ಆನೆ, ಆಫ್ರಿಕಾ ಒಡೆದುಕೊಂಡು ಸಾವಿರಾರು ಮೈಲಿಗಳಷ್ಟು ಕಡಲಿನ ಮೇಲೆ ತೇಲಿ ಬಂದಾಗ, ಒಂದಷ್ಟು ಜರಿಯದೆ ನಲಿದಾಡುತ್ತಾ ಬಂದುದು ಈ ಆನೆ ಮರಿ. ಆಗ ಹರಿಯುವ ನದಿಗಳಿದ್ದವೇ, ಇಲ್ಲವೇ ಹೊಲ ಕಾಡುಗಳಿದ್ದವೇ, ತಿನ್ನಲು ಹಸಿರು ಇತ್ತೇ? ಏನೂ ಗೊತ್ತಿಲ್ಲ. ಆದರೆ ಆ ಆನೆಯ ಮರಿ ಇಂದೂ ಈ ನಾಡಿನಲ್ಲಿ ಕುಣಿದಾಡುತ್ತಿರುವುದನ್ನು ನೋಡಿದಾಗ, ಆ ಆನೆ ಎಲ್ಲಾ ವಿಘ್ನಗಳನ್ನೂ ಎದುರಿಸಿ ಬಂದಿರುವುದನ್ನು ಕಾಣುತ್ತೇವೆ. ಆ ಮೇಲೆ ಈ ಖಂಡ ತೇಲಿ ಬಂದು ಏಷಿಯಾ ಖಂಡಕ್ಕೆ ಡಿಕ್ಕಿ ಹೊಡೆದಾಗ ಕೈಲಾಸ ಬೆಟ್ಟ ಮೇಲೇರಿದುದು ತಿಳಿಯುತ್ತದೆ. ಅಂದರೆ ನಮ್ಮ ತವರು ಮನೆ, ಕೈಲಾಸವನ್ನು ಕಂಡಿತು. ಈ ಕೈಲಾಸದ ಒಡನೆ ಮದುವೆಯಾದ ಕೂಡಲೇ ಎಲ್ಲಾ ಗಾಳಿ ಮಳೆಯನ್ನೂ ಈ ಬೆಟ್ಟಗಳ ಸಾಲು ತಡೆದು ಇಲ್ಲಿಯೇ ಅನೇಕ ನದಿಗಳನ್ನು ಹುಟ್ಟು ಹಾಕಿತು. ಇಷ್ಟು ನದಿಗಳು ತುಂಬಿ ತುಳುಕಿದಾಗ ಈ ತವರು ಮನೆ "ವರ್ಷಭರಿತ"ವಾಗಿ ಭಾರತ ವರ್ಷವಾಯಿತು.

ನಮ್ಮ ಎಲ್ಲಾ ಋತುಗಳನ್ನು ನಾವು ನೋಡಿದಾಗ ಬೇಸಿಗೆಯಲ್ಲಿ ಈ ನೆಲ ಒಣಗಿ ಕೆಂಪಾಗಿರುತ್ತದೆ. ಆಮೇಲೆ ತುಸು ಮಳೆಯಾಗಿ ನೆಲದಲ್ಲಿ ಮೊಳಕೆಗಳು ಮೂಡಿ ಹಸಿರಾಗುತ್ತದೆ. ಮಳೆ ಹೆಚ್ಚು ಸುರಿಯುತ್ತಾ, ಹಸಿರಿನ ಜೊತೆ ಹಣ್ಣುಗಳೂ ಮೂಡಿ ಬಣ್ಣ ಮಾರ್ಪಾಡಾಗುತ್ತದೆ. ಕಾಯಿಗಳು ಹಣ್ಣಾದಾಗ, ಹಳದಿಯಾಗುತ್ತದೆ. ಬಾನಿನಲ್ಲಿ ನೀರಿನ ತೇವ ಕೂಡಿ ಆ ನೇಸರುವಿನ ಬೆಳಕನ್ನು ಕಾಮನ ಬಿಲ್ಲಾಗಿ ಬಗ್ಗಿಸಿ ಬಣ್ಣ ಬಣ್ಣವನ್ನು ತೋರುತ್ತವೆ. ಇದೇ ನವರಾತ್ರಿ. ನಮ್ಮ ತಾಯಿ ಬಣ್ಣ ಬಣ್ಣವಾಗಿ ನಮ್ಮನ್ನು ಕಾಯುವುದೇ ಈ ನವರಾತ್ರಿ. ಆಕೆ ಕೆಂಪಾಗಿ, ರಕ್ತವರ್ಣ ಹಸಿರಾಗಿ, ಮರಕತವಲ್ಲಿ ಹಳದಿಯಾಗಿ, ಸ್ವರ್ಣಗೌರಿ ನೀಲಿಯಾಗಿ ನೀಲಾಂಬಿಕೆಯಾಗಿ ಮೆರೆಯುತ್ತಾಳೆ. ಆಕೆ ತಿಳಿಯಾಗಿ "ಶಾರದೆ"ಯಾಗುತ್ತಾಳೆ. ಹಾಗೆಯೇ ತಿಳಿಯಲು ಸಾಧ್ಯವಿಲ್ಲದಂತೆ ದುರ್ಗಿಯಾಗುತ್ತಾಳೆ. ಆಕೆಯೇ ಗೌರಿ ಆಕೆಯೇ ಕಾಳಿಯಾಗಿ ಮೆರೆಯುತ್ತಾಳೆ. ಈ ಭೂತಾಯಿಯೇ ನಮ್ಮನ್ನು ಪೊರೆಯುವ ಅವ್ವ. ಆಕೆಯ ಮಡಿಲಿನಲ್ಲಿಯೇ ಹುಟ್ಟಿ, ನಲಿದು ಮತ್ತೆ ಆಕೆಯ ಮಡಿಲಿಗೇ ಸಾಗುವ ನಾವು ಆಕೆಯ ಮಕ್ಕಳು. ಪರ್ವತಗಳನ್ನು ಉಳ್ಳ ಈಕೆಯೇ "ಪಾರ್ವತಿ". ಆ ಗಂಗಾಧರನನ್ನು ಸೇರಿ ಗಂಗೆಗಳನ್ನು ಹರಿಯಲು ಬಿಟ್ಟು ಮತ್ತೆ ಕೆಲವು ದಿನಗಳಿಗಾಗಿ ತವರು ಮನೆಗೆ ಹಸಿರು ಉಟ್ಟು ಬರುವ ಈ ನಮ್ಮ ಅವ್ವನನ್ನು ಬರಮಾಡಿಕೊಳ್ಳುವ ಹಬ್ಬವೇ ಸ್ವರ್ಣಗೌರಿ ಹಬ್ಬ. ಅಂದರೆ ಈ ಭಾರತ ಮಾತೆಯೇ ಪಾರ್ವತಿ. ನಮ್ಮೆಲ್ಲರನ್ನೂ ಸಲಹುವ ಅವ್ವ.

# ನಾಟಕಕ್ಕೆ ಒಲಿದ ಇಂಜಿನಿಯರ್!!
# ಮಹಾನ್ ಸಂಘಟಕ! ಕೆ. ಮಂಜುನಾಥಯ್ಯ



✍ ಪ್ರೊ. ಜಿ. ಎನ್. ಉಪಾಧ್ಯ

ಮೈಸೂರು ಅಸೋಸಿಯೇಷನ್ ಮುಂಬೈ ಕನ್ನಡಿಗರ ಮನೆ ಮಾತಾದ ಸಂಸ್ಥೆ. ಈಗ ಅಸೋಸಿಯೇಷನ್ ಗೆ ಶತಮಾನದ ಸಂಭ್ರಮ. ಇದಕ್ಕೆ ಕಾಯಕಲ್ಪ ನೀಡಿದ ಪ್ರಮುಖರಲ್ಲಿ ಕೆ. ಮಂಜುನಾಥಯ್ಯ ಅವರದು ಎದ್ದು ಕಾಣುವ ಹೆಸರು. ಅವರ ಭಿನ್ನ ವಿಭಿನ್ನ ಬಗೆಯ ಕನ್ನಡ ಕಾಯಕ ನಾಡಿಗೆ ಮಾದರಿ. ಈಗ ಅವರಿಗೆ ಎಂಬತ್ನಾಲ್ಕರ ಹರೆಯ. ಕೆ. ಮಂಜುನಾಥಯ್ಯ ಅವರೊಂದಿಗೆ ನಡೆಸಿದ ಮಾತುಕತೆಯ ಕಿರು ಲೇಖನ ಇಲ್ಲಿದೆ.



ಮೈಸೂರು ಅಸೋಸಿಯೇಷನ್, ಮುಂಬಯಿ ಕನ್ನಡಿಗರ ಹೆಮ್ಮೆಯ ಪ್ರತಿಷ್ಠಿತ ಸಂಘ ಸಂಸ್ಥೆಗಳಲ್ಲಿ ಒಂದು. ಇಂದು ಮುಂಬಯಿ ಮಹಾನಗರದ ಹೃದಯಭಾಗದಲ್ಲಿ ಬಹುಮಹಡಿ ಸಂಕೀರ್ಣದೊಳಗೆ ಸುಸಜ್ಜಿತ ಸಭಾಗೃಹ ಹಾಗೂ ಇನ್ನಿತರ ಆಧುನಿಕ ಸೌಲಭ್ಯಗಳನ್ನು ಹೊಂದಿ ಕನ್ನಡಿಗರ ಅಭಿಮಾನದ ಸಂಸ್ಥೆಯಾಗಿ ಶತಮಾನದ ಸಂಭ್ರಮದಲ್ಲಿ ಮೆರೆಯುತ್ತಿರುವ ಮೈಸೂರು ಅಸೋಸಿಯೇಷನ್‌ನ ಆಧುನಿಕ ಮೆರಗಿಗೆ ಕಾರಣೀಭೂತರಾದವರಲ್ಲಿ ಶ್ರೀಯುತಕೆ. ಮಂಜುನಾಥಯ್ಯ ಅವರೂ ಒಬ್ಬರು.

ಮಂಜುನಾಥಯ್ಯ ಅವರದು ಬಹುಮುಖ ಪ್ರತಿಭೆ. ಅವರೊಬ್ಬ ಸಮರ್ಥ ನಟ, ಒಳ್ಳೆಯ ವಾಗ್ಮಿ, ಹೆಸರಾಂತ ಇಂಜಿನಿಯರ್, ಅತ್ಯುತ್ತಮ ಸಂಘಟಕ, ಪ್ರಗತಿಪರ ಚಿಂತಕರು. ಅವರು ಹೊರನಾಡಿನಲ್ಲಿ ಒಂದು ಸಂಸ್ಥೆಯನ್ನು ಹೇಗೆ ಕಟ್ಟಿ ಬೆಳೆಸಬೇಕೆಂಬುದನ್ನು ತೋರಿಸಿಕೊಟ್ಟ ಮಹಾನ್ ಸಾಹಸಿ. ಶಿಸ್ತು, ಸಂಯಮಕ್ಕೆ ಹೆಸರಾಗಿರುವ ಮಂಜುನಾಥಯ್ಯ ಅವರು ಬಹುಭಾಷಾ ಸಂವೇದನೆಯನ್ನು ಮೈಗೂಡಿಸಿಕೊಂಡ ಅಪರೂಪದ ಸಂವೇದನಶೀಲ ಕನ್ನಡಿಗ. ತನು ಶುದ್ಧ ಮನ ಶುದ್ಧ ಭಾವ ಶುದ್ಧವಾಗಿ ಮುಂಬೈಯಲ್ಲಿ ಕನ್ನಡದ ತೇರನ್ನು ಎಳೆದ ಧೀರ ಮಾದರಿ ಕನ್ನಡಿಗ ಮಂಜುನಾಥಯ್ಯ. ಕಳೆದ ಆರು ದಶಕಗಳ ಅವರ ಕನ್ನಡ ಕೈಂಕರ್ಯ, ಸಾಂಸ್ಕೃತಿಕ ಪರಿಚಾರಿಕೆ ನಾಡಿಗೆ ಮಾದರಿ. ಅವರೊಬ್ಬ ವ್ಯಕ್ತಿಯಲ್ಲ, ದೈತ್ಯ ಶಕ್ತಿ ಎಂದರೆ ಉತ್ಪ್ರೇಕ್ಷೆಯಾಗದು.

ಮಂಜುನಾಥಯ್ಯ ಅವರು ಮೂಲತಃ ಹಾಸನ ಜಿಲ್ಲೆಯ ನಂದನಹಾಲು ಗ್ರಾಮದವರು. ಅವರ ಬಾಲ್ಯದ ವಿದ್ಯಾಭ್ಯಾಸ ತರೀಕೆರೆಯಲ್ಲಿ ನಡೆಯಿತು. ಅನಂತರ ಹಾಸನ ಮೈಸೂರು ಮೊದಲಾದ ಕಡೆ ಶಿಕ್ಷಣ ಪಡೆದರು. ಅವರದು ಸುಸಂಸ್ಕೃತ ಮನೆತನ. ತಂದೆಯವರು ರೆವಿನ್ಯೂ ಇಲಾಖೆಯಲ್ಲಿ ಸೇವೆಯಲ್ಲಿದ್ದರು. ಅಕ್ಕನ ಮನೆಯಲ್ಲಿದ್ದು ಓದು ಮುಂದುವರಿಸಿದರು. ಬಾಲ್ಯದಲ್ಲಿಯೇ ಸಂಸ್ಕೃತ ಸಾಹಿತ್ಯದ ಪರಿಚಯವಾಯಿತು. ಆದರೂ ವಿಜ್ಞಾನಿಯಾಗಬೇಕು ಎಂಬ ಕನಸು ಕಂಡು ಆ ಮಾರ್ಗದಲ್ಲಿ ಸಾಗಿ ಇಂಜಿನಿಯರಿಂಗ್ ಪದವಿ ಪಡೆದರು. ಮುಂದೆ ಗುಲ್ಬರ್ಗಾದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಅವರಿಗೆ ಕೊಯಿನಾ ಹೈಡ್ರೋ ಯೋಜನೆಯಲ್ಲಿ ಕೆಲಸ ಮಾಡಲು ಬುಲಾವ್ ಬಂದಿತು. ಅಲ್ಲಿಂದ ಪುಣೆ, ಮುಂದೆ ಮುಂಬಯಿಯ ಬಿ.ಎ.ಆರ್.ಸಿ.ಯಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ ಮಂಜುನಾಥಯ್ಯ ಅವರು ಈಗ ನಿವೃತ್ತ ಜೀವನ ನಡೆಸುತ್ತಿದ್ದರೂ ಸಾಂಸ್ಕೃತಿಕ ಪರಿಚಾರಿಕೆಯಲ್ಲಿ ತಮ್ಮನ್ನು ಪೂರ್ಣಪ್ರಮಾಣದಲ್ಲಿ ತೊಡಗಿಸಿ ಕೊಂಡಿದ್ದಾರೆ. ಮೈಸೂರು ಅಸೋಸಿಯೇಷನ್ ಗೆ ನೂತನ ಆಯಾಮವನ್ನು ನೀಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಸರಳ ಸಜ್ಜನಿಕೆಯ ನೇರ ನಡೆ ನುಡಿಯ ವಿರಳ ಸಾಧಕ ಮಂಜುನಾಥಯ್ಯ. ಈಗ ಅವರಿಗೆ 84ರ ಪ್ರಾಯ. ಅವರೊಂದಿಗೆ ನಡೆಸಿದ ಮಾತುಕತೆಯ ವಿವರ ಇಲ್ಲಿದೆ.

**ಪ್ರಶ್ನೆ:** ನಿಮ್ಮ ಮುಂಬಯಿಯ ಆರಂಭದ ದಿನಗಳು ಹೇಗಿದ್ದವು? ಮೈಸೂರು ಅಸೋಸಿಯೇಷನ್ನಿನ ಜೊತೆಗೆ ನಿಮ್ಮ ಸಂಬಂಧದ ಕುರಿತು ತಿಳಿಸುವಿರಾ?

**ಉತ್ತರ:** ನಾನು ಉದ್ಯೋಗ ನಿಮಿತ್ತ ೧೯೬೨ರಲ್ಲಿ ಮುಂಬಯಿಗೆ ಬಂದೆ. ಆ ಹೊತ್ತಿಗೆ ಇಲ್ಲಿ ಮೈಸೂರು ಅಸೋಸಿಯೇಷನ್‌ನ ಮೆಸ್ ಬಹಳ ಹೆಸರುವಾಸಿಯಾಗಿತ್ತು. ಬೇರೆ ಬೇರೆ ಕಡೆಗಳಿಂದ ಬಂದ ಯುವಕರು ಅಸೋಸಿಯೇಷನ್‌ನ ಮೆಸ್‌ಗೆ ತಪ್ಪದೇ ಬರುತ್ತಿದ್ದರು. ಇದಕ್ಕೆ ಕಾರಣ ಕಡಿಮೆ ಬೆಲೆಯಲ್ಲಿ ಇಲ್ಲಿ ದೊರೆಯುತ್ತಿದ್ದ ಸ್ವಾದಿಷ್ಟಪೂರ್ಣವಾದ ಊಟ. ಜೊತೆಗೆ ಹರಟೆ, ಕಾರ್ಡ್ಸ್ ಆಟ, ಮನೋರಂಜನ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆಗ ಮುಂಬಯಿಯಲ್ಲಿ ಉದ್ಯೋಗಕ್ಕೆ ಕೊರತೆ ಇರಲಿಲ್ಲ. ಅಸೋಸಿಯೇಷನ್ ಎಂದರೆ ಒಂದು

ರೀತಿಯಲ್ಲಿ ಇಂಜಿನಿಯರ್ಸ್ ಅಸೋಸಿಯೇಷನ್ ಆಗಿತ್ತು ಎನ್ನಬಹುದು. ಬಿ. ಎ. ಆರ್.ಸಿ.ಯಲ್ಲಿ ಇದ್ದ ಹೆಚ್ಚಿನ ಅಭಿಯಂತರರೆಲ್ಲ ಕರ್ನಾಟಕದವರಾಗಿದ್ದರು. ಅನಂತರ ಬೇರೆ ಬೇರೆ ಉದ್ಯೋಗದವರೂ ಇಲ್ಲಿಗೆ ಬಂದರು. ಹಿಂದೆ ಸಿನಿಮಾರಂಗದಲ್ಲಿ ಹೆಸರು ಮಾಡಿದ ಶ್ರೀನಿವಾಸ್, ಸಂಪತ್, ವಿ. ಕೆ. ಮೂರ್ತಿ, ಲಕ್ಷ್ಮೀನಾರಾಯಣ ಮೊದಲಾದ ಸಿನಿಮಾಟೋಗ್ರಾಫರ್ಸ್ ಅಸೋಸಿಯೇಷನ್ ಜೊತೆಗೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದರು.

ಮೊದಲ ಹಂತದಲ್ಲಿ ಮೈಸೂರು ಅಸೋಸಿಯೇಷನ್ ನಾಟಕದ ಜೊತೆಗೆ ಕ್ರೀಡೆಗೆ ವಿಶೇಷ ಮಹತ್ವ ನೀಡಿತು. ಇದರ ಸದಸ್ಯರು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದಾರೆ. ೧೯೮೬ರ ವರೆಗೂ ಅಸೋಸಿಯೇಷನ್‌ನಲ್ಲಿ ಬಾಸ್ಕೆಟ್ ಬಾಲ್ ಟೂರ್ನಮೆಂಟ್ ನಡೆಸಿಕೊಂಡು ಬರಲಾಯಿತು. ಮೈಸೂರು ಒಡೆಯರು ಈ ಸಂಸ್ಥೆಗೆ ಸಂಸಾರ ಸಮೇತರಾಗಿ ಭೇಟಿನೀಡಿ ಇಲ್ಲಿನ ಚಟುವಟಿಕೆಯನ್ನು ಕಂಡು ಸಂತೋಷ ವ್ಯಕ್ತಪಡಿಸಿದ್ದು ಈಗ ಇತಿಹಾಸ, ೧೯೩೦ರಲ್ಲಿ ಮೈಸೂರು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಅವರೂ ಇಲ್ಲಿಗೆ ಬಂದಿದ್ದರು. ಶಿಕ್ಷಣ ಕ್ಷೇತ್ರದಲ್ಲೂ ಅಸೋಸಿಯೇಷನ್ ಮಹತ್ವದ ಕೆಲಸ ಮಾಡಿದೆ. ಎನ್.ಕೆ.ಇ.ಎಸ್. ಶಾಲೆಯ ಅಭಿವೃದ್ಧಿಯಲ್ಲಿ, ಈಗ ತಲೆ ಎತ್ತಿ ಹೆಸರು ಮಾಡಿರುವ ವೃತ್ತಿಪರ ಕಾಲೇಜು ಬೆಳವಣಿಗೆಯಲ್ಲಿ ಅಸೋಸಿಯೇಷನ್‌ದು ಸಿಂಹಪಾಲು.

**ಪ್ರಶ್ನೆ**: ನಿಮಗೆ ನಾಟಕದಲ್ಲಿ ಆಸಕ್ತಿ ಮೂಡಿದ್ದು ಹೇಗೆ?

**ಉತ್ತರ:** ಶಾಲಾ ದಿನಗಳಿಂದಲೇ ನನಗೆ ಸಾಹಿತ್ಯ ಸಂಗೀತದ ಗೀಳು ಅಂಟಿಕೊಂಡಿತು. ನಾನು ಹಾಸನದಲ್ಲಿ ಓದುತ್ತಿದ್ದಾಗ ಅಂದಿನ ಪ್ರಸಿದ್ಧ ಸಾಹಿತಿಗಳಾದ ದ. ರಾ. ಬೇಂದ್ರೆ, ಅನಕೃ, ತ. ರಾ. ಸು ಮೊದಲಾದವರು ನಮ್ಮ ಶಾಲೆಗೆ ಭೇಟಿಕೊಟ್ಟಿದ್ದರು. ಬೇಂದ್ರೆ ಅವರಂತೂ ಮೂರು ಬಾರಿ ನಮ್ಮಲ್ಲಿಗೆ ಬಂದು ಹೋದರು. ಅವರು ಕಾವ್ಯ ಓದುತ್ತಿದ್ದ ಬಗೆ, ಪರಿಣಾಮಕಾರಿಯಾದ ಭಾಷಣಕ್ಕೆ ಮಾರುಹೋದವರಲ್ಲಿ ನಾನೂ ಒಬ್ಬ. ನಿಜ ಹೇಳಬೇಕೆಂದರೆ ಹಾಸನದ ಜನ ರಸಿಕರು; ಒಳ್ಳೆಯ ಸಹೃದಯರು. ಕಂಪೆನಿ ನಾಟಕಗಳ ಪೋಷಕರು. ನಮ್ಮ ಅಣ್ಣ ಸೀತಾರಾಮ ಕಂಪೆನಿ ನಾಟಕಗಳ ಸ್ಥಳೀಯ ಆತಿಥ್ಯ ನೋಡಿಕೊಳ್ಳುತ್ತಿದ್ದ. ಹೀಗಾಗಿ ಹಾಸನಕ್ಕೆ ಬಂದ ನಾಟಕ ಕಂಪೆನಿಗಳ ನಾಟಕ ನೋಡಲು (ಬಿಟ್ಟಿಯಾಗಿ) ನನಗೆ ಅವಕಾಶ ದೊರೆಯಿತು. ಹೈಸ್ಕೂಲ್‌ನಲ್ಲಿ ನಮ್ಮದೇ ಆದ ಒಂದು ಕ್ರಿಕೆಟ್ ಟೀಮ್ ಇತ್ತು. ಕ್ರಿಕೆಟ್ ಆಟದ ಕಿಟ್ ಕೊಳ್ಳಲು ನಮ್ಮಲ್ಲಿ ಹಣವಿರಲಿಲ್ಲ. ಯಾರೋ ಪುಣ್ಯಾತ್ಮರು ನಾಟಕ ಮಾಡಿದರೆ ಎರಡು ಸಾವಿರ ರೂಪಾಯಿ ಕೊಡುವುದಾಗಿ ಹೇಳಿದರು. ನಾಟಕ ಮಾಡಿ ದುಡ್ಡು ಉಳಿಸಿದರೆ ಕ್ರಿಕೆಟ್ ಕಿಟ್ ಕೊಂಡುಕೊಳ್ಳಬಹುದೆಂದು ಯೋಚಿಸಿ ನಾಟಕ ಮಾಡಿಯೇ ಬಿಟ್ಟೆವು. ಮೂರು ನಾಲ್ಕು ವರ್ಷ ಊರಲ್ಲಿ ಸತತವಾಗಿ ನಾಟಕವಾಡಿದೆವು. ಕ್ರಿಕೆಟ್ ಗಿಂತ ನಾವು ನಾಟಕದಲ್ಲಿ ಪಳಗಿದೆವೋ ಅನ್ನಿಸಿತು. ಮುಂದೆ ಕಾಲೇಜು ದಿನಗಳಲ್ಲಿ ಕನ್ನಡ ನಾಟಕಗಳನ್ನು ನೋಡುತ್ತಿದ್ದೆವಾದರೂ ಅದರಲ್ಲಿ ಪಾತ್ರ ವಹಿಸುವ ಉಸಾಬರಿಗೆ ಹೋಗಲಿಲ್ಲ.

೧೯೬೨ರಲ್ಲಿ ಮುಂಬಯಿಗೆ ಬಂದೆ. ಮೈಸೂರು ಕಾಲನಿಯಲ್ಲಿ ನಾನು ವಾಸ ಮಾಡುತ್ತಿದ್ದೆ. ಡಾ| ಮಂಜುನಾಥ್ ಅವರ ಪರಿಚಯವಾಯಿತು. ನನಗೆ ಕಾರ್ಡ್ಸ್ ಆಟದಲ್ಲಿ ವಿಶೇಷ ಆಸಕ್ತಿ. ಅಸೋಸಿಯೇಷನ್‌ನಲ್ಲಿ ಆ ಹೊತ್ತಿಗೆ ಸಾಕಷ್ಟು ರಂಗಚಟುವಟಿಕೆ ನಡಿತಾ ಇತ್ತು. ನಾನು ಪ್ರೇಕ್ಷಕನಾಗಿ ಆ ಪ್ರಯೋಗಗಳನ್ನು ನೋಡುತ್ತಿದ್ದೆ. ೧೯೭೦-೭೨ರ ಹೊತ್ತಿಗೆ ಡಾ| ಮಂಜುನಾಥ್ ವಿದೇಶದಿಂದ ಉನ್ನತ ಅಧ್ಯಯನ ಮುಗಿಸಿ ಮುಂಬಯಿಗೆ ಬಂದಾಗ ಅಸೋಸಿಯೇಷನ್‌ನ ರಂಗ ಚಟುವಟಿಕೆಗೆ ಹೊಸ ಆಯಾಮ ದೊರೆಯಿತು. ವಿ. ಕೆ. ಮೂರ್ತಿ ಅವರ ನಿರ್ದೇಶನದಲ್ಲಿ ನಟನೆಯಲ್ಲಿ ಆಗ ಹೆಸರು ಮಾಡಿದವರೆಲ್ಲ ನಮ್ಮ ಗೆಳೆಯರೇ ಆಗಿದ್ದರು. ಡಾ| ಮಂಜುನಾಥ್ ಅವರ ಒತ್ತಾಯದಿಂದ ನಾನು ನಾಟಕ ರಂಗಕ್ಕೆ ಮರು ಪ್ರವೇಶ ಮಾಡಿದೆ. ಮೊದಲು ಮಾಡಿದ್ದು ನೇಪಥ್ಯದ ಕೆಲಸ. ಅಸೋಸಿಯೇಷನ್ ಕನ್ನಡ ಕಲಾಕೇಂದ್ರದ ನಾಟಕೋತ್ಸವಕ್ಕೆ ಹೊಸ ಹೊಸ ನಾಟಕಗಳನ್ನು ಕೊಡುತ್ತಾ ಬಂದ ಸಂಪ್ರದಾಯ, ಒಂದು ಬಾರಿ ಮಂಜುನಾಥ್ ನಿರ್ದೇಶನದ ರಂಗೋಲಿ ನ್ಯಾಯ (ಮೂಲ ಬ್ರೇಕ್ಟ್ನ ನಾಟಕ)ದ ರಿಹರ್ಸಲ್ ನಡೆದಿತ್ತು. ಅದರಲ್ಲಿ ಪ್ರಮುಖ ಪಾತ್ರವಹಿಸಿದ್ದ ಕಲಾವಿದರೊಬ್ಬರಿಗೆ ಬರಲಾಗಲಿಲ್ಲ. ಈ ನಾಟಕ ಷಣ್ಮುಖಾನಂದ ಸಭಾಗೃಹದಲ್ಲಿ ನಡೆಯುವುದಿತ್ತು. ಇನ್ನೇನು ಮಾಡುವುದೆಂದು ಗೊಂದಲಕ್ಕೊಳಗಾದೆವು. ಆ ಸಂದರ್ಭದಲ್ಲಿ ನಿರ್ದೇಶಕ ಡಾ| ಮಂಜುನಾಥ್ ಆ ಮುಖ್ಯ ಪಾತ್ರವನ್ನು ನನ್ನ ತಲೆಗೆ ಕಟ್ಟಿದರು. ಮೂವತ್ತು ವರ್ಷದ ಅನಂತರ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ಬಂದೆ. 'ರಂಗೋಲಿನ್ಯಾಯ' ನಾಟಕಕ್ಕೆ ಹಿಂದೆಂದೂ ಸಿಗದಷ್ಟು ಪ್ರೋತ್ಸಾಹ ಪ್ರತಿಕ್ರಿಯೆ ಬಂದಿತು. ನಾನು ನಾಟಕವನ್ನು ಸೀರಿಯಸ್ ಆಗಿ ತೆಗೆದುಕೊಂಡೆ. ಡಾ| ಮಂಜುನಾಥ ನಿರ್ದೇಶನದ ಮುಂದಿನ ನಾಟಕಗಳಲ್ಲಿ ನನಗೆ ಗಟ್ಟಿಯಾದ ಪಾತ್ರಗಳು ಸಿಕ್ಕಿದವು. ರಂಗೋಲಿನ್ಯಾಯ, ಬೆಳ್ಳಿ ಬಯಲು, ಬಿಸಿಲ್ಗುದುರೆ, ಬೆಂದಕಾಳೂರು ಮೊದಲಾದ ನಾಟಕಗಳಲ್ಲಿ ಪಾತ್ರವಹಿಸಿದೆ. ಅನೇಕ ಪ್ರದರ್ಶನಗಳನ್ನು ಕಂಡವು. ಜನ ನನ್ನನ್ನು ಒಳ್ಳೆ ನಟ ಅಂತ ಬೆನ್ನು ತಟ್ಟಿದ್ದರು.

**ಪ್ರಶ್ನೆ**: ಅರವತ್ತು, ಎಪ್ಪತ್ತರ ದಶಕದ ಮುಂಬಯಿ ರಂಗಭೂಮಿ ಹೇಗಿತ್ತು?

**ಉತ್ತರ;** ಆಗ ಮುಂಬಯಿ ರಂಗಭೂಮಿ ಅತ್ಯಂತ ಕ್ರಿಯಾಶೀಲವಾಗಿತ್ತು. ವರ್ಷಕ್ಕೆ ಹತ್ತಾರು ಹೊಸ ನಾಟಕಗಳು, ನಾಟಕೋತ್ಸವಗಳು ನಡೆಯುತ್ತಿದ್ದಿತ್ತು. ನಲುವತ್ತಕ್ಕಿಂತ ಹೆಚ್ಚು ನಾಟಕ ತಂಡಗಳಿದ್ದವು. ಶಾಲೆ, ಕಾಲೇಜುಗಳ ಯುವಕರು ಒಳ್ಳೆಯ ನಾಟಕಗಳನ್ನು ಸಾದರಪಡಿಸುತ್ತಿದ್ದರು. ಉತ್ತಮ ನಿರ್ದೇಶಕರು ಅಂದು ಇದ್ದರು. ಕೆ. ಕೆ. ಸುವರ್ಣ, ಆರ್. ಡಿ. ಕಾಮತ್, ಕೆ. ಜಿ. ರಾವ್, ಸದಾನಂದ ಸುವರ್ಣ, ವಿ.ಕೆ. ಮೂರ್ತಿ, ದುಗ್ಗಪ್ಪಯ್ಯ, ಡಾ| ಮಂಜುನಾಥ್ ಮೊದಲಾದವರು ಥಿಯೇಟರ್‌ನ್ನು ಗಂಭೀರವಾಗಿ ತೆಗೆದುಕೊಂಡು ನಾಟಕ ಮಾಡುತ್ತಿದ್ದರು. ಕೈಲಾಸಂ, ಲಂಕೇಶ್, ಶ್ರೀರಂಗ, ಜಡಭರತ, ಪರ್ವತವಾಣಿ, ಕುವೆಂಪು, ಶ್ರೀರಂಗ, ಕಂಬಾರ, ಚಂದ್ರಶೇಖರ ಪಾಟೀಲ ಹೀಗೆ ಅಂದಿನ ಪ್ರಮುಖ ನಾಟಕಕಾರರ ನಾಟಕಗಳನ್ನು ಮುಂಬಯಿ ರಂಗಮಂಚದಲ್ಲಿ ಆಡಿಸಲಾಗುತ್ತಿದ್ದಿತ್ತು. ಅಸೋಸಿಯೇಷನ್ ಮಿತ್ರರು ಸೊಲ್ಲಾಪುರ, ಬೆಂಗಳೂರು, ತುಮಕೂರು ಮೊದಲಾದ ಕಡೆ ನಾಟಕೋತ್ಸವಗಳಲ್ಲಿ ಭಾಗವಹಿಸಿ ಜನಮೆಚ್ಚುಗೆಗೆ ಪಾತ್ರರಾದರು. ಬೆಂಗಳೂರಿಂದ ಆಗ ಮುಂಬಯಿಗೆ ಬೇರೆ ಬೇರೆ ನಾಟಕ ತಂಡಗಳು ಬಂದು ಇಲ್ಲಿ ನಾಟಕವಾಡಿ ವಾಪಾಸಾಗುತ್ತಿದ್ದವು. ಆದರೆ ಮುಂಬಯಿಯ ನಾಟಕ ತಂಡವೊಂದು ಮೊದಲ ಬಾರಿಗೆ ಕರ್ನಾಟಕಕ್ಕೆ ಹೋಗಿ ಅನೇಕ ಕಡೆ ಪ್ರದರ್ಶನ ನೀಡಿ ಇತಿಹಾಸ ನಿರ್ಮಿಸಿದ ಸಾಧನೆ ಮೈಸೂರು ಅಸೋಸಿಯೇಷನ್ ತಂಡದ್ದು. ನಮ್ಮ ತಂಡದ ನಾಟಕವನ್ನು ನೋಡಿ ಬಿ.ವಿ. ಕಾರಂತರು ಮನಸಾರೆ ಕೊಂಡಾಡಿದ್ದೂ ಉಂಟು.

ಮೈಸೂರು ಅಸೋಸಿಯೇಷನ್‌ಗೂ ನಾಟಕಕ್ಕೂ ಅಂಟಿದ ನಂಟಿಗೆ ಬಹಳ ಹಳಮೆ ಇದೆ. ಕೈಲಾಸಂ ಕೆಲಕಾಲ ಮುಂಬಯಿಯ ಮೈಸೂರು ಅಸೋಸಿಯೇಷನ್ನಲ್ಲಿ ಇದ್ದರು. ಇಲ್ಲಿದ್ದಾಗ ಅವರು ಕೆಲವು ನಾಟಕಗಳನ್ನು ಬರೆದರು. ಅನಂತರ ಶ್ರೀರಂಗ, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತ, ಪರ್ವತ ವಾಣಿ ಮೊದಲಾದ ನಾಟಕಕಾರರು ಆಗಾಗ ನಮ್ಮಲ್ಲಿಗೆ ಬಂದುಹೋಗಿದ್ದಾರೆ. ಸಿ.ಜೆ. ಕೃಷ್ಣಸ್ವಾಮಿ, ನಾಗೇಶ್ ಮೊದಲಾದ ನಿರ್ದೇಶಕ, ಕಲಾವಿದರೊಂದಿಗೂ ಒಳ್ಳೆಯ ಸಂಬಂಧವಿತ್ತು. ದೂರದ ಮುಂಬಯಿಯಲ್ಲಿದ್ದರೂ ಕನ್ನಡ ರಂಗಭೂಮಿಯ ಆಗು ಹೋಗುಗಳನ್ನು ನಾನು ಗಮನಿಸುತ್ತಾ ಬಂದವನು.

ಮುಂಬಯಿ ಕನ್ನಡ ರಂಗಭೂಮಿಯಲ್ಲಿ ಮರಾಠಿ ನಾಟಕದ ಅಲೆ ಹೆಚ್ಚ ತೊಡಗಿದ್ದ ಕಾಲದಲ್ಲಿ ಬೇರೆ ನಮೂನೆಯ ತಂತ್ರಗಳನ್ನು ಡಾ| ಮಂಜುನಾಥ್ ಚಾಲ್ತಿಗೆ ತಂದು ತಮ್ಮ ಪ್ರತಿಭೆಯನ್ನು ಮೆರೆದರು. ಯಶಸ್ವಿ ನಾಟಕಕಾರ, ನಟ, ನಿರ್ದೇಶಕ. 'He is Jabbar Patel of Kannada' ಅಂತ ಮರಾಠಿ ರಂಗತಜ್ಞರು ಅವರನ್ನು ಕೊಂಡಾಡಿದರು. ಇದೆಲ್ಲ ಈಗ ಇತಿಹಾಸ. ನಮ್ಮ ಬಗೆಗೆ ನಾವೇ ಹೇಳಿಕೊಂಡರೆ ಅದು ಚೆನ್ನಾಗಿರೋಲ್ಲ.

**ಪ್ರಶ್ನೆ:** ಈಗ ಅಸೋಸಿಯೇಷನ್ನಲ್ಲಿ ಅಷ್ಟೊಂದು ರಂಗ ಚಟುವಟಿಕೆಗಳು ನಡೆಯುತ್ತಿಲ್ಲ ಅನ್ನಿಸುವುದಿಲ್ಲವೇ?

**ಉತ್ತರ:** ಮೊದಲಿನ ದಿನಗಳಲ್ಲಿದ್ದ ಉತ್ಸಾಹ ಈಗ ಇಲ್ಲ ನಿಜ. ನಮ್ಮಲ್ಲಿ ತರಬೇತಿ ಪಡೆದ ಕಲಾವಿದರು ಬೇರೆ ಬೇರೆ ಕಡೆ ಹೋಗಿ ನೆಲೆಸಿದ್ದಾರೆ. ಹೊಸ ತಲೆಮಾರಿನವರಿಗೆ ಇದರಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಅಸೋಸಿಯೇಷನ್ ಈಗ ನಾಟಕವಲ್ಲದೆ ಸಂಗೀತ, ಸಾಹಿತ್ಯ, ಕಲೆ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳಿಗೂ ಒತ್ತು ನೀಡುತ್ತಿದೆ. ಸಂಘಸಂಸ್ಥೆಗಳ ಸಹಯೋಗದಲ್ಲೂ ಕಾರ್ಯಕ್ರಮಗಳು ನಡೆಯುತ್ತಿವೆ. ಮುಂಬಯಿಯ ಇತರ ಪ್ರಮುಖ ಸಂಘಸಂಸ್ಥೆಗಳು ಕನ್ನಡದ ಕೆಲಸ ಮಾಡುತ್ತಿವೆ. ಬಹುಭಾಷಿಕರ ನಡುವೆ ನಾವು ದ್ವೀಪವಾಗಿರುವಂತಿಲ್ಲ. ಪೃಥ್ವಿ, ಉದಯನ, ಇಷ್ಟಾ ಮೊದಲಾದ ರಂಗತಂಡಗಳೊಂದಿಗೆ ನಮ್ಮ ಸಂಸ್ಥೆ ಕೈಜೋಡಿಸಿದೆ. ಹಿಂದಿ, ಮರಾಠಿ, ಗುಜರಾತೀ, ಬಂಗಾಳಿ ರಂಗಪ್ರಪಂಚದೊಂದಿಗೆ ನಾವೂ ಸಂವಾದ ನಡೆಸಬೇಕು. ಈ ನಿಟ್ಟಿನಲ್ಲಿ ಮೈಸೂರು ಅಸೋಸಿಯೇಷನ್ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಿದೆ. ಈಗ ಸುಸಜ್ಜಿತವಾದ ರಂಗಮಂದಿರವಿದೆ. ಇದನ್ನು ನಮ್ಮ ಯುವಕರು ಕಲಾವಿದರು ಸದುಪಯೋಗಪಡಿಸಿಕೊಳ್ಳಬೇಕು.

**ಪ್ರಶ್ನೆ:** ಒಬ್ಬ ಕಲಾವಿದನಾಗಿ ಕನ್ನಡ ರಂಗಭೂಮಿಯ ಕುರಿತು ನಿಮ್ಮ ನಿಲುವೇನು?

**ಉತ್ತರ:** ಕನ್ನಡ ರಂಗಭೂಮಿ ಇತರ ಭಾರತೀಯ ರಂಗಭೂಮಿಯಷ್ಟೇ ಶ್ರೀಮಂತವಾದುದು. ನಾಮಾಂಕಿತ ನಾಟಕಕಾರರು ನಮ್ಮಲ್ಲಿ ಆಗಿಹೋಗಿದ್ದಾರೆ. ಕೆಲವರು ಈಗಲೂ ನಮ್ಮ ಮಧ್ಯೆ ಇದ್ದಾರೆ. ಬಿ.ವಿ. ಕಾರಂತರಂಥ ಅದ್ಭುತ ರಂಗಚೇತನವನ್ನು ನಾಡಿಗೆ ನೀಡಿದ ಭಾಗ್ಯ ಕರ್ನಾಟಕದ್ದು. ಕಂಬಾರ, ಗಿರೀಶ್ ಮೊದಲಾದವರು ನಿಜವಾಗಿಯೂ ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ನಾಟಕಕಾರರು. ಕೈಲಾಸಂ, ಸಂಸ, ಶ್ರೀರಂಗರನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ.

# ಪ್ರವಾಸದ ಅನುಭವ ಕಥನ



**✍ ಡಾ| ಸುಮಾ ದ್ವಾರಕಾನಾಥ್**

ಬೆಂಗಳೂರಿನ ಸರಸ್ವತಿ ವಿದ್ಯಾ ಮಂದಿರದಲ್ಲಿ teacher's educational tour ಅಲ್ಲದೆ ಮಕ್ಕಳ ಪ್ರವಾಸವೂ ಇರುತ್ತಿತ್ತು. ಒಂದೊಂದು ವರ್ಷ, ಒಬ್ಬೊಬ್ಬ ಟೀಚರ್ ಗೆ ಟೂರ್ ಸೆಕ್ರೆಟರಿಯಾಗಿ ಜವಾಬ್ದಾರಿ ನಿರ್ವಹಿಸಬೇಕಾಗುತ್ತಿತ್ತು. ಹೀಗಾಗಿ ನನಗೂ ಕೆಲವು ಅವಕಾಶಗಳು ಸಿಕ್ಕಿದ್ದವು. ಮದ್ರಾಸ್, ಮೈಸೂರು ಅಂತ ಸಣ್ಣಪುಟ್ಟದ್ದಲ್ಲದೆ, ದೆಹಲಿಗೂ ಮಕ್ಕಳ ಜೊತೆ ಹೋಗುವ ಅನುಭವವೂ ದಕ್ಕಿತ್ತು.

ಮಕ್ಕಳ ಜೊತೆ ಅಂದ್ರೆ, ಅವರ ತುಂಟಾಟಗಳಿಗೂ ಸಾಕ್ಷಿಯಾಗಬೇಕಿತ್ತು. ಮೈಸೂರು ಒಂದು ದಿನದ ಪ್ರವಾಸವಾದರೆ ಮದ್ರಾಸ್ ಮೂರು ದಿನದ ಪ್ರವಾಸವಾಗಿರುತ್ತಿತ್ತು. ದೆಹಲಿಗಂತೂ ಹತ್ತು ದಿನದ ಪ್ರವಾಸ. ಇನ್ನೂ ಮಿಡಲ್ ಸ್ಕೂಲ್ ಆದ್ರಿಂದ ಈಗಿನ ಹಾಗೆ ಹೆಣ್ಣು ಮಕ್ಕಳ ದೈಹಿಕ ಆಕರ್ಷಣೆ ನಮಗೆ ಸಮಸ್ಯೆಯಾಗಿರಲಿಲ್ಲ. ರಾತ್ರಿ ಹೊತ್ತು ಗಂಡು ಮಕ್ಕಳು ಅವರ ಗೆಳೆಯರ ಬಾಯಿಗೆ ಟೂತ್ ಪೇಸ್ಟ್ ಮೆತ್ತುವುದೋ, ಕಾಲುಗಳನ್ನು ಕಟ್ಟಿಬಿಡುವುದೋ ಇಂಥ ತುಂಟಾಟಗಳಲ್ಲಿ ಮಗ್ನರಾಗಿರುತ್ತಿದ್ದರು. ಮಕ್ಕಳ ತುಂಟಾಟಗಳನ್ನು ಸಹಿಸಿಕೊಳ್ಳುತ್ತಲೇ ಅವರನ್ನು ಸಂಭಾಳಿಸುವುದು ಒಂದು ಕಲೆ. ನನ್ನ ನಗು ಮುಖವನ್ನು ಇವತ್ತಿಗೂ ನೆನಪಿಸಿಕೊಳ್ಳುವವರು ನನ್ನ ವಿದ್ಯಾರ್ಥಿಗಳೇ. ಅದೇ ನನಗೆ ಹೆಮ್ಮೆ.

ದೇವರು ಯಾವ ಸೌಲಭ್ಯವನ್ನೂ ಸಲೀಸಾಗಿ ಕೊಡುವುದಿಲ್ಲ ಎನ್ನುವುದಕ್ಕೆ ನನ್ನದೇ ಉದಾಹರಣೆಗಳಿವೆ. ಸುಮಾರು ೨೫ ಜನ ಟೀಚರ್ ಗಳಲ್ಲಿ ನನ್ನನ್ನು, ಮಕ್ಕಳ ದೆಹಲಿಯ ಪ್ರವಾಸಕ್ಕೆ ಆಯ್ಕೆ ಮಾಡಿದರು. ಅದು ನನ್ನ ಅದೃಷ್ಟವೆಂದುಕೊಂಡರೆ ಅಷ್ಟರಲ್ಲಿ ನನ್ನ ಆರೋಗ್ಯ ಕೆಟ್ಟಿತು. ಬೆಂಗಳೂರಿನ ಹವಾಕ್ಕೋ, ಸೀಮೆಸುಣ್ಣದ ಧೂಳೋ ಅಂತೂ ನನಗೆ ಬೆಂಗಳೂರಲ್ಲಿರುವ ತನಕ ಅಸ್ತಮಾ ತೊಂದರೆ ಕಾಡುತ್ತಿತ್ತು. ರಾತ್ರಿ ಖಾಯಿಲೆ ಉಲ್ಬಣಿಸಿ, ಬೆಳಗ್ಗೆ ಹೊತ್ತಿಗೆ ಸತ್ತು ಸತ್ತು ಬದುಕ್ತಿದ್ದೆ. ನನ್ನ ದುರಾದೃಷ್ಟ, ಆ ಹೊತ್ತಿಗೇ ಬರಬೇಕೇ! ಆಲೋಪತಿ, ಹೋಮಿಯೋಪತಿ ಎಲ್ಲಾ ಪ್ರಯತ್ನಿಸಿದ್ದಾಯಿತು. ಇನ್ನೇನು ನನ್ನ ಬದಲು ಬೇರೆ ಟೀಚರ್ ನ ಹೆಸರೂ ಸೂಚಿಸಲಾಯ್ತು ಎನ್ನುವ ಹೊತ್ತಿಗೆ ನನಗೆ ಬಹಳ ನಿರಾಶೆಯಾಗಿತ್ತು. ಎರಡು ದಿನ ಯಾವ ಔಷಧಿಯೂ ಬೇಡವೆಂದು ನಿರ್ಧರಿಸಿ ವಿಶ್ರಾಂತಿ ತೆಗೆದುಕೊಂಡಾಯ್ತು. ಮನಸ್ಸಿಗಿಂತ ಬೇರೊಂದು ವಿಸ್ಮಯವುಂಟೇ, ನನ್ನ ಆರೋಗ್ಯ ಸುಧಾರಿಸಿಕೊಂಡು ಸರಿ, ಮಕ್ಕಳ ಜೊತೆ ಹೊರಟಿದ್ದೇ ಬಂತು.

ದೆಹಲಿಯಲ್ಲಿ ಆಗ ASIA ೭೨ ಎನ್ನುವ ಒಂದು ಅಂತರಾಷ್ಟ್ರೀಯ ಕೈಗಾರಿಕಾ ಮೇಳವನ್ನು ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಉದ್ಘಾಟಿಸುವವರಿದ್ದರು. ಅದರಲ್ಲಿ ೫೦ ದೇಶಗಳು ಭಾಗವಹಿಸುತ್ತಿದ್ದವು. ಜೊತೆಗೇ ಅಲ್ಲಿಯ ವಿಜ್ಞಾನ ಭವನ, ಅಶೋಕ ಹೋಟೆಲ್ ಮತ್ತು ಪ್ರಗತಿ ಮೈದಾನ ಗಳೂ ಈ ಸಂಭ್ರಮಕ್ಕಾಗಿ ಸಜ್ಜುಗೊಂಡಿದ್ದವು. ಈ ವೈಭವವನ್ನು ನೋಡುವುದಕ್ಕೇ ನಮ್ಮ ಶಾಲೆಯಿಂದಲೂ ಮಕ್ಕಳಿಗೆ ಪ್ರವಾಸ ಏರ್ಪಡಿಸಿದ್ದರು. ಅದರಲ್ಲಿ ಭಾಗಿಯಾದುದು ನನ್ನ ಅದೃಷ್ಟವೆನ್ನಬೇಕು. ಅದರ ನೆನಪುಗಳು ಅಷ್ಟು ಉಳಿಯದಿದ್ರೂ ಫೋಟೋಗಳು ಮಾತ್ರ ಸಾಕ್ಷಿಭೂತವಾಗಿ ಇಂದಿಗೂ ನಿಂತಿವೆ. ಜೀವನ ಪಯಣದಲ್ಲಿ ಇಂಥ ಪ್ರವಾಸದ ಅಧ್ಯಾಯ ಆಗ ಮುಗಿಯಿತೆನಿಸಿದರೂ, ಮದುವೆಯಾಗಿ ಮುಂಬಯಿಗೆ ಬಂದ ಮೇಲೆ ಅನುಜಾ ಮಹಿಳಾ ಸಂಘದ ಮೂಲಕ ಮತ್ತೊಂದು ಪ್ರವಾಸದ ಕ್ಷಿತಿಜ ತೆರೆದುಕೊಂಡುದು ನನಗೆ ರೆಕ್ಕೆ ಪುಕ್ಕ ಬಂದ ಹಾಗಾಗಿತ್ತು.

**ಅನುಜಾ ಮಹಿಳಾ ಸಂಘ- ಡೊಂಬಿವಿಲಿ: Team ಅಂದ್ರೆ each one achieves more** ಅನ್ನೋ ಹಾಗೆ ಸಂಘವು, ಕನ್ನಡ ಮಹಿಳೆಯರ ಸಾಂಸ್ಕೃತಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒಂದು ಚಿಮ್ಮು ಹಲಗೆ ಯಾಯಿತು. ಡೊಂಬಿವಿಲಿಯ ಕನ್ನಡ ಕುಟುಂಬಗಳಿಗೆ ಒಂದು ವರದಾನವಾಗಿ ಪರಿಣಮಿಸಿತು. ತೌರಿನಿಂದ ದೂರ ಇದ್ದರೂ ಕನ್ನಡ ವಾತಾವರಣವನ್ನು ಮರು ಸೃಷ್ಟಿಸಿದ್ದು ಸುಳ್ಳಲ್ಲ. ಎಲ್ಲರೂ ಪ್ರವಾಸ ಪ್ರಿಯರಾದುದರಿಂದ ವರ್ಷಕ್ಕೆ ಒಂದು ದಿನದ ಪ್ರವಾಸ ಮತ್ತು ೩-೪ ದಿನಗಳ ದೀರ್ಘ ಪ್ರವಾಸವನ್ನೂ ಏರ್ಪಡಿಸುವುದೆಂದು ಸಂಘ ತೀರ್ಮಾನಿಸಿತು. ನಮಗೆಲ್ಲಾ ಖುಷಿಯೋ ಖುಷಿ. ಹಾಗಾಗಿ ಸುಮಾರು ಪ್ರವಾಸಗಳನ್ನು ಮಾಡಿದ ಅನುಭವವನ್ನು ಸದಸ್ಯೆಯರಿಗೆ ಸಂಘ ಕೊಟ್ಟಿದೆ.

ಮೊದಲ ವರ್ಷಗಳಲ್ಲಿ ಡೊಂಬಿವಿಲಿಯ ಸುತ್ತ ಮುತ್ತ ಇರುವ ಪ್ರವಾಸಿ ತಾಣಗಳನ್ನು ನೋಡಲು ಸಾಧ್ಯವಾಯಿತು. ಬೊಂಬಾಯಿಯ ಸಮುದ್ರ ತೀರಗಳನ್ನು ನೋಡುವುದೇ ಒಂದು ಮಜಾ. ಸುಮಾರು ಹತ್ತಿರವಿರುವ ಆಲಿಬಾಗ್ ಗೆ ಮೊದಲ ಒಂದು ದಿನದ ಪ್ರವಾಸಕ್ಕೆ ಒಂದು ಬಸ್ ತುಂಬಾ ಜನರನ್ನ

ತುಂಬಿಕೊಂಡು ಹೋಗಿದ್ದೆವು. ಆಗಿನ್ನೂ ಕ್ಯಾಟರಿಂಗ್ ಕಾಂಟ್ರಾಕ್ಟ್ ಶುರುವಾಗಿರಲಿಲ್ಲ. ನಾವೇ ಬೆಳಗ್ಗೆ ೫ ಗಂಟೆಗೇ ಎದ್ದು ಇಡ್ಲಿ, ಚಟ್ನಿ, ಚಿತ್ರಾನ್ನ ಮತ್ತು ಮೊಸರನ್ನ ಸದಸ್ಯೆಯರ ಮನೆಯಿಂದಲೇ ಮಾಡಿ ತೆಗೆದುಕೊಂಡು ಹೋಗುತ್ತಿದ್ದೆವು. ಜೊತೆಗೆ ಮನೆ ಕಾಫಿ ಫ್ಲಾಸ್ಕ್ನಲ್ಲಿ. ಅಷ್ಟೆಲ್ಲಾ ನಾವೇ ಬೆವರಿಳಿಸಿಕೊಂಡು ತಯಾರು ಮಾಡಿಕೊಂಡು ಹೋಗಿಯೂ ಸಹ ಪ್ರವಾಸವನ್ನೂ enjoy ಮಾಡ್ತಿದ್ವಿ. ಈಗಿನ ಪಿಕ್ನಿಕ್ ಗೆ ಹೋಲಿಸಿದರೆ ನಗು ಬರುತ್ತೆ.

ಡೊಂಬಿವಿಲಿಯಿಂದ ಸುಮಾರು ೨ ಗಂಟೆ ಪಯಣ. ನಮ್ಮ ಹಿಂದೂ ಸಾಮ್ರಾಜ್ಯದಲ್ಲಿ, ಹೇಗೆ ಆಲಿಬಾಗ್ ಎನ್ನುವ ಹೆಸರು ಆ ಊರಿಗೆ ಬಂತು ಎನ್ನುವುದೂ ಸೋಜಿಗ. ಇಸ್ರೇಲಿನ ಒಬ್ಬ ಆಲಿ ಅಲಿಯಾಸ್ ಎಲಿ ಎನ್ನುವ ಒಬ್ಬ ಜ್ಯೂ ಇಲ್ಲಿ ತುಂಬಾ ಭಾವಿಗಳನ್ನು ಅಗೆಸಿದ್ದನಂತೆ. ಜೊತೆಗೆ ತೆಂಗಿನ ತೋಟಗಳನ್ನೂ ಮತ್ತು ಮಾವಿನ ತೋಪುಗಳನ್ನೂ ನೆಡಿಸಿದ್ದನಂತೆ. ಹಾಗಾಗಿ ಮರಾಠಿಯಲ್ಲಿ ಆಲಿ ಚಿ ಬಾಗ್ ಎನ್ನುವುದು ಆಲಿಬಾಗ್ ಆಗಿ ಉಳಿದುಕೊಂಡಿದೆ. ಈಗ ಅಲ್ಲ ಅವನ ಹೆಸರಿನ ೧೦-೧೧ ಭಾವಿಗಳು ಉಳಿದುಕೊಂಡಿವೆ.

ಆಲಿಬಾಗ್‌ನಲ್ಲಿ, ಅರಬ್ಬೀ ಸಮುದ್ರದ ಮೇಲೆ ಸೂರ್ಯಾಸ್ತ ನೋಡಲೇ ಚಂದ. ಅಲ್ಲಿಯ ಇನ್ನೊಂದು ವಿಶೇಷವೆಂದರೆ, ಸಮುದ್ರದ ಇಳಿತವಿದ್ದಾಗ ಮಾತ್ರ, ಸಮುದ್ರದ ನಡುವೆ ಕಟ್ಟಿರುವ ಕೊಲಾಬಾ ಕೋಟೆಯನ್ನು ನೋಡಬಹುದು. ಮೊಳಕಾಲುದ್ದದ ನೀರಿನಲ್ಲಿಸುಮಾರು ಒಂದು ಒಂದೂವರೆ ಕಿ.ಮೀ. ನಡೆದು ಅಲ್ಲಿಗೆ ತಲುಪಿದೆವು. ಈ ಕೋಟೆಯನ್ನು ಛತ್ರಪತಿ ಸಂಭಾಜಿ ರಾಜೆ, ತನ್ನ ತಂದೆ ಶಿವಾಜಿ ರಾಜನ ಮರಣಾನಂತರ ೧೬೮೧ರಲ್ಲಿ ಬ್ರಿಟಿಷರ ಹಡಗುಗಳನ್ನು ತಡೆಯಲು, ಪೇಷ್ವೆ ಬಾಲಾಜಿ ವಿಶ್ವನಾಥ ಕೊಳಾಲನ ಜೊತೆ ಒಪ್ಪಂದ ಮಾಡಿಕೊಂಡು, ಸಮುದ್ರದ ನಡುವೆ ಕೋಟೆ ಕಟ್ಟಿಸಿ, ಸರ್ಕಾಲ್ ಕಾನೋಜಿ ಆಂಗ್ರೆ ಎನ್ನುವ ನೌಕಾ ಪಡೆಯ ಸರದಾರನಿಗೆ ಅದರ ಜವಾಬ್ದಾರಿ ಒಪ್ಪಿಸಿದನಂತೆ. ಅದರ ಚರಿತ್ರೆಯನ್ನು ಹಿಂದಿ, ಮರಾಠಿ ಮತ್ತು ಇಂಗ್ಲೀಷಿನಲ್ಲಿ ಕೋಟೆಯ ಬಾಗಿಲಿನಲ್ಲೇ ಮಾಹಿತಿ ನೀಡಿದ್ದಾರೆ. ಈಗ ಆ ಕೋಟೆಗಳು ಪುರಾತತ್ವಶಾಸ್ತ್ರದ ಅಧೀನದಲ್ಲಿದೆ. ಈ ಕೋಟೆಯಲ್ಲಿ ೧೭ ಬುರುಜುಗಳಿವೆ. ಉತ್ತರ, ದಕ್ಷಿಣಕ್ಕೆ ಬಾಗಿಲುಗಳು ಇವೆ. ಅಲ್ಲಿ ತುಕ್ಕು ಹಿಡಿದ ತೋಪುಗಳನ್ನೂ ಪ್ರದರ್ಶನಕ್ಕಿಟ್ಟಿದ್ದಾರೆ. ಒಂದು ಗಣೇಶನ ಮಂದಿರವೂ ಇದೆ. ಪಾಚಿ ಕಟ್ಟಿದ ಒಂದು ಹಸಿರು ಕೊಳವೂ ಇದೆ. ಮತ್ತೆ ಸಮುದ್ರದ ಉಬ್ಬರ ಏರುವುದರೊಳಗೆ ನಾವು ವಾಪಸ್ಸಾಗಬೇಕಾದ್ದರಿಂದ ಬೇಗ ಹೊರಡಬೇಕಾಯ್ತು. ಸಮುದ್ರದ ಏರಿಳಿತದೊಂದಿಗೆ ಕೋಟೆ ನೋಡಿದ ಸಂಭ್ರಮವೇ ನನಗೆ ಇನ್ನೂ ಇವತ್ತಿಗೂ ಮರೆಯಲಾಗಿಲ್ಲ.

ಪದ್ಮಾಕ್ಷಿ ರೇಣುಕೆಯ ಮಂದಿರವೂ ಅಲ್ಲಿದೆ. ಇನ್ನೊಂದು ವಿಶೇಷವೆಂದರೆ ಅಲ್ಲಿ ಬ್ರಿಟಿಷರು ಕಟ್ಟಿರುವ magnetic observatory ಜಗತ್ತಿನ ೧೩ observatory ಗಳಲ್ಲೊಂದು ಎಂದು ಹೆಸರಾಗಿದೆ.

ಈ ಪ್ರವಾಸಗಳು ಮನಸ್ಸಿಗೆ ಉಲ್ಲಾಸ ನೀಡುವುದಲ್ಲದೆ ಎಷ್ಟೊಂದು ಮಾಹಿತಿಯನ್ನೂ ನೀಡಿ ನಮ್ಮ ತಿಳಿವಳಿಕೆಗೂ ಕಾರಣವಾಗುತ್ತದೆ ಎನ್ನುವುದು ಎಷ್ಟು ಸತ್ಯ!

## ಸದಸ್ಯರ ಗಮನಕ್ಕೆ.....

**ಇದೇ ಅಕ್ಟೋಬರ್ 3 ರಿಂದ ನವರಾತ್ರಿ ಹಬ್ಬ ಆರಂಭವಾಗಲಿದೆ. ಈ ವರ್ಷ ನಮ್ಮ ಮೈಸೂರು ಅಸೋಸಿಯೇಷನ್ ನಲ್ಲಿ ಸ್ವಲ್ಪ ಬೇರೆ ರೀತಿಯಲ್ಲಿ ನವರಾತ್ರಿ ಹಬ್ಬವನ್ನು ಆಚರಿಸುವ ನಿರ್ಧಾರ ಮಾಡಿರುತ್ತೇವೆ.**

**ನಮ್ಮ ಸದಸ್ಯರಲ್ಲಿ ಒಂದು ವಿನಂತಿ. ಈ ವರ್ಷ ನಾವು ಅಸೋಸಿಯೇಷನ್ ನಲ್ಲಿ ಗೊಂಬೆಗಳನ್ನು ಕೂರಿಸುವವರಿದ್ದೇವೆ. ಅದರಲ್ಲಿ ಯಾರಿಗಾದರೂ ತಮ್ಮ ಮನೆಯಲ್ಲಿರುವ ದೇವ ದೇವತೆಯರ ಗೊಂಬೆಗಳಾಗಲಿ ಬೇರೆ ಇತರ ಬಗೆಯ ಗೊಂಬೆಗಳಾಗಲಿ ತಂದು ಕೂರಿಸುವ ಮನಸಿದ್ದರೆ ದಯವಿಟ್ಟು ತಿಳಿಸಿ. ಒಟ್ಟು ಎಷ್ಟು ಗೊಂಬೆಗಳು ಸಿಗುತ್ತವೆ ಎಂದು ಗೊತ್ತಾದರೆ ಗೊಂಬೆಗಳ ಮೆಟ್ಟಿಲು ಎಷ್ಟು ಮಾಡಬೇಕೆಂಬುದಾಗಿ ತಿಳಿಯುತ್ತದೆ. ಆದ್ದರಿಂದ ಆದಷ್ಟು ಬೇಗ ತಿಳಿಸಿ ಸಹಕರಿಸಬೇಕೆಂದು ವಿನಂತಿ. ಇತರ ವಿವರಗಳನ್ನು ನಿರೀಕ್ಷಿಸಿ.**

# ಮೂವತ್ತಾರು ಇಪ್ಪತ್ನಾಲ್ಕು ಮೂವತ್ತಾರು



ಕಳೆದ ಸಂಚಿಕೆಯಿಂದ.... (ಉಮಾ ರಾವ್ ಕಥೆಗಳು)

✍ **ಉಮಾ ರಾವ್**

"ಹೌದು ನಿರ್ಮಲಾ. ನಾನು ಓದಿದ್ದೆ. ಇಲ್ಲಿ ಯಾರೋ ಡಾ. ತಲ್‌ವಾಲ್‌ಕರ್ ಅಂತ ಪ್ಲಾಸ್ಟಿಕ್ ಸರ್ಜನ್ ಮಾಡ್ತಾರಂತಲ್ಲಾ..."

"ಹೂಂ, ನೋಡು ಮಾಲಿನಿ. ನಿನ್ನೆ ಮಧ್ಯಾಹ್ನವೇ ಹೋಗಿ ಅವರನ್ನು ನೋಡಿದೆ. ಅವರೆಲ್ಲಾ ಎಕ್ಸ್‌ಪ್ಲೇನ್ ಮಾಡಿದರು. ನೋಡು, ನಮಗೆ ಬೇಕಾದ ಸೈಜಿನ ಒಂದು ಇಂಪ್ಲಾಂಟ್ಸ್ ತಯಾರು ಮಾಡ್ತಾರಂತೆ. ಒಂದು ಚಿಕ್ಕ ಆಪರೇಷನ್ ಮಾಡಿ ಅದನ್ನು ಕೂಡಿಸ್ತಾರಂತೆ. ಅಷ್ಟೆ, ಬ್ಯೂಟಿಫುಲ್ ಫಿಗರ್! ಇದು ನ್ಯಾಚುರಲ್ ಅಲ್ಲಾಂತ ನಿಮಗೂ ಗೊತ್ತಾಗೊಲ್ಲಾಂತ ನಕ್ಕರು. ಹಣವೇನೋ ಸ್ವಲ್ಪ ಹೆಚ್ಚಾಗಿಯೇ ಖರ್ಚಾಗುತ್ತೆ. ಅಲ್ಲ ನೀನೇ ಹೇಳು... ಇದು ವರ್ತ್ ಹೌದೋ ಅಲ್ಲವೋ... ಆಫ್ಟರ್ ಆಲ್ ಒಂದೇ ಲೈಫ್ ಅಲ್ವಾ ಮಾಲಿನಿ?"

ಮಾಲಿನಿ ಹೌದೆಂದು ತಲೆ ಅಲ್ಲಾಡಿಸಿದಳು.

"ಮನೇಲಿ ಏನಂತಾರೆ..." ಎಂದು ಅನುಮಾನಿಸುತ್ತಲೇ ಕೇಳಿದಳು.

"ನಿನ್ನೆ ನನ್ನ ಗಂಡ ಆಫೀಸಿನಿಂದ ಬಂದ ತಕ್ಷಣ ಈ ವಿಷಯ ಹೇಳಿದೆ. ನಾನು ನಿಂಗೆ ಮೊದಲೇ ಹೇಳಿದ್ರುಲ್ಲಾ ಅವು ಬ್ರಾಡ್ ಮೈಂಡೆಡ್ ಅಂತ... ಇಷ್ಟರ ಮೇಲೆ ಅವರಿಗೆ ನನ್ನ ಸ್ವಭಾವನೂ ಗೊತ್ತಲ್ಲಾ. ನನ್ನ ತಲೆ ಒಳಗೆ ಏನಾದ್ರೂ ಒಂದು ಕೀಳು ಹೊಕ್ಕುಬಿಟ್ಟರೆ ಆಯ್ತು ಅಂತ... ಅದಕ್ಕೇ ನಿಂಗೆ ಇದು ಅಷ್ಟೊಂದು ಸಮಾಧಾನ ತರೋ ಹಾಗಿದ್ರೆ ಮಾಡಿಸ್ಕೋ... ಆದರೆ ಇದು ಎಷ್ಟು ಸೇಫ್ ಅನ್ನೋದನ್ನು ಮೊದಲು ಖಾತರಿ ಮಾಡೋ ಅಂದರು. ಇಷ್ಟರಮೇಲೆ ಒಂದ್ವಿಷಯ ಹೇಳು ಮಾಲಿನಿ, ಯಾವ ಮನುಷ್ಯ ತಾನೇ ಎಂಜಾಯ್ ಮಾಡೊಲ್ಲ... ಯಾರಿಗೆ ಬೇಡ...!"

"ಅದೇನೋ ಕ್ಯಾನ್ಸರ್ ಭಯ ಅಂತಾರೆ" ಮಾಲಿನಿ ಮಾತು ಬದಲಿಸಿದಳು.

"ಡಾ. ತಲ್‌ವಾಲ್‌ಕರ್ ಹತ್ತಿರ ನಾನೆಲ್ಲಾ ಡಿಸ್‌ಕಸ್ ಮಾಡ್ದೆ ಮಾಲಿನಿ. ಅವರೆಷ್ಟು ಫೇಮಸ್ ನಿಂಗೇ ಗೊತ್ತಲ್ಲಾ, ಇದು ಪರ್ಫೆಕ್ಟ್‌ಲೀ ಸೇಫ್ ಅಂತೆ. ಹೆಚ್ಚು ದಿನ ಆಸ್ಪತ್ರೆಲಿ ಇರೋದೂ ಬೇಕಾಗಿಲ್ವಂತೆ. ನಂಗೆ ಅದೇ ಯೋಚನೇ ಆಗಿತ್ತು. ನಮ್ಮ ಭಾವ, ನಾದಿನಿ ಎಲ್ಲಾ ಇದೇ ಊರಲ್ಲಿದಾರಲ್ಲಾ. ನಾನು ಆಸ್ಪತ್ರೆಲಿ ಇದೀನೀಂತ ಹೇಗೋ ಸುದ್ದಿ ತಲುಪಿದರೆ ಆಯ್ತು, ಓಡಿ ಬಂದ್ಬಿಡ್ತಾರೆ... ನೋಡೋಕೆ... ಆಗ ನನ್ನ ಸ್ಥಿತಿ ಇಮ್ಯಾಜಿನ್ ಮಾಡೋ..." ಇದನ್ನು ಹೇಳುತ್ತಲೇ ಅವಳ ಮುಕ್ತ ನಗು ಹರಿದು ಬಂತು.

ಆದರೆ ಇದನ್ನೆಲ್ಲಾ ಹೇಳಿಕೊಳ್ಳಲು ನಿರ್ಮಲಾ ತನ್ನನ್ನೇಕೆ ಆರಿಸಿದಳು ಎಂಬ ಯೋಚನೆ ಮಾಲಿನಿಯನ್ನು ಕಾಡುತ್ತಲೇ ಇತ್ತು.

"ನೋಡು ಇನ್‌ಫ್ಯಾಕ್ಟ್ ನನಗೆ ನಿನ್ನ ಕಂಡ್ರೆ ಎಷ್ಟೊಂದು ಅಸೂಯೆ ಆಗೋದು ಗೊತ್ತಾ? ಯೂ ಆರ್ ಸೋ ಬ್ಯೂಟಿಫುಲ್. ನಾನು ಮೊದಲ ಸಲ ನಮ್ಮ ಲೇಡೀಸ್ ಕ್ಲಬ್ ಮೀಟಿಂಗ್‌ನಲ್ಲಿ ನಿನ್ನನ್ನು ನೋಡಿದ್ದು. ಎಂಥಾ ಕಾಂಪ್ಲೆಕ್ಷನ್, ಎಂಥ ಫಿಗರ್... ನಿನ್ನನ್ನೇ ನೋಡ್ತಾ ಇರೋಣ ಅನ್ನಿಸ್ತಾ ಇತ್ತು. ಇನ್ನು ನಿನ್ನ ಜಡೆ. ಎಷ್ಟು ಚೆನ್ನಾಗಿತ್ತು. ಅನ್ಯಾಯವಾಗಿ ಕಟ್ ಮಾಡಿಬಿಟ್ಟೆ. ಹೇಗೆ ಮನಸ್ಸು ಬಂತೋ ನಿಂಗೆ. ನಾನಂದ್ಕೋತಾ ಇದ್ದೆ... ನೀನು ಭರತನಾಟ್ಯ ಮಾಡಿದ್ರೆ ಹೇಗಿರಬಹುದು ಅಂತ... ನೀನು ಆ ಡ್ರೆಸ್ ಹಾಕಿ ಸ್ಟೇಜ್ ಮೇಲೆ ಬಂದ್ರೆ..."

ಮಾಲಿನಿಗೆ ಸಂಕೋಚದಿಂದ ಏನು ಹೇಳಲೂ ತಿಳಿಯಲಿಲ್ಲ.

"ಹುಂ, ಈಗ್ಲೂ ಕಲೀಬಹುದು ನೀನು. ನಾನು ಕಲೀಲಿಲ್ವಾ, ಲೇಟ್ ಅಂದ್ಕೋಬೇಡ. ಇರಲಿ, ಯಾಕೆ ಈ ಮಾತು ಬಂತೂಂದ್ರೆ... ನಾನು ಇದೇ ವಿಷಯ ನನ್ನ ಕೆಲವು ಫ್ರೆಂಡ್ಸ್ ಹತ್ತಿರ ಮಾತಾಡ್ತಿದ್ದಾಗ ಅಕಸ್ಮಾತ್ ಅವರು ಹೇಳಿದು... ನೀನೂ... ನೀನೂ... ಇದೇ ಆಪರೇಷನ್ ಮಾಡಿಸಿಕೊಂಡಿದೀ ಅಂತ... ಅದಕ್ಕೇ ನಿನ್ನನ್ನು ಈ ವಿಷಯ ಕೇಳೋಕೆ ಬಂದೆ... ಸರಿಯಾಗಿ ಎಲ್ಲಾ ತಿಳ್ಕೊಂಡ್ರೆ ಧೈರ್ಯ ಬರುತ್ತೇಂತ... "

ಶಾಕ್ ಆದ ಮಾಲಿನಿಯ ಮುಖ ಕಂಡು ನಿರ್ಮಾಲಾಗೆ ಕಸಿವಿಸಿಯಾಯಿತು.

"ಇಲ್ಲ ತಪ್ಪು ತಿಳ್ಕೋಬೇಡ. ಇಷ್ಟರ ಮೇಲೆ... ಅದರಲ್ಲಿ ತಪ್ಪೇನು? ಇನ್ ಫ್ಯಾಕ್ಟ್ ಐ ಅಡ್ ಮೈರ್ ಯೂ... ಅದೂ ನೀನು ಮಾಡೆಲಿಂಗ್ ಬೇರೆ ಮಾಡ್ತೀಯಲ್ಲಾ.... ಒಳ್ಳೇದೇ..."

ಮಾಲಿನಿಯ ತಲೆ ಬಿಸಿ ಆಯಿತು.

"ನಿರ್ಮಲಾ, ಇಂಥಾ ಹುಚ್ಚುಚ್ಚು ಕತೆ ಯಾರು ಹಬ್ಬಿಸ್ತಾರೋ ಅರ್ಥ ಆಗೊಲ್ಲ. ನಾನು ಮಾಡೆಲಿಂಗ್ ಎಂದೂ ಮಾಡಿಲ್ಲ. ನೀನು ತಪ್ಪು ತಿಳ್ಕೊಂಡಿದೀಯಾ. ಆಗಾಗ ನಾಟಕಗಳಲ್ಲಿ ಅಭಿನಯಿಸ್ತೀನಿ... ನಮ್ಮದೊಂದು ಸಣ್ಣ

ಥಿಯೇಟರ್ ಗ್ರೂಪ್ ಇದೆ... ಅದೂ, ನನ್ನ ಮಗನ ಪರೀಕ್ಷೆ ಟೈಮ್ ಅಲ್ಲದೆ, ಸುಲಭವಾಗಿ ರಿಹರ್ಸಲ್‌ಗೆ ಹೋಗ ಬಹುದಾದರೆ... ಮೊದಲಿಂದ ನಂಗೆ ನಾಟಕಗಳಲ್ಲಿ ತುಂಬಾ ಆಸಕ್ತಿ. ಅದ್ಯಾರು ನಿನಗೆ ಹೀಗೆಲ್ಲಾ ಹೇಳಿದೋರು..."

ಈಗ ನಿರ್ಮಲಾ ಗಲಿಬಿಲಿಗೊಂಡಳು.

"ಆಂ... ಇಲ್ಲ... ಏನೂ ಅಂದ್ರೆ... ಮೊದಲು ನೀನು ಈ ಕಾಲೋನಿಗೆ ಬಂದಾಗ... ತುಂಬಾ ಸಣ್ಣಗೆ ಇದ್ದೇಂತ ಕಾಣುತ್ತೆ... ಇರಲಿ ಬಿಡು..."

"ನೋಡು ನಿರ್ಮಲಾ, ಇಂಪ್ಲಾಂಟ್ಸ್ ಮಾಡಿಸಿಕೊಂಡ್ರೆ ತಪ್ಪೇನೂ ಇಲ್ಲ. ಆದರೆ ನಾನು ಮಾಡಿಸಿಕೊಂಡಿಲ್ಲ ಅಷ್ಟೇ..."

"ಕಾಫಿ ತರ್ತೀನಿ" ಎಂದವಳೇ ಮಾಲಿನಿ ಎದ್ದು ಹೋದಳು. ನಿರ್ಮಲಾ ಎದ್ದು ಅವಳ ಹಿಂದೆಯೇ ಅಡಿಗೆ ಮನೆಗೆ ನಡೆದು ಬಂದಳು.

"ಐ ಆ್ಯಮ್ ಸಾರಿ ಮಾಲಿನಿ, ತಪ್ಪು ತಿಳ್ಕೊಬೇಡ. ಇವರಿಗೆಲ್ಲಾ ಊಹೆ ಮಾಡೋದೇ ಕೆಲಸ... ಯಾರಾದ್ರೂ ನೋಡೋಕೆ ಚೆನ್ನಾಗಿದ್ರೆ ಸಹಿಸೊಲ್ಲ..."

ಮಾಲಿನಿ ಕೊಟ್ಟ ಕಾಫಿಯನ್ನು ಅಡಿಗೆಮನೆ ಪ್ಲಾಟ್‌ಫಾರ್ಮ್ ಮೇಲೆ ಕೂತೇ ಕುಡಿದು, ಕಪ್ಪು ಇಟ್ಟು ನಿರ್ಮಲಾ ಗಡಿಯಾರ ನೋಡಿದಳು.

"ನಾನು ಹೊರಡ್ತೀನಿ... ಮತ್ತೆ ಯಾವುದೂ ಡಿಸೈಡ್ ಮಾಡಿದ ಮೇಲೆ ನಿಂಗ ಹೇಳೀನಿ... ತುಂಬಾ ಥ್ಯಾಂಕ್ಸ್ ಮಾಲಿನಿ... ಆದರೆ... ನನ್ನ ವಿಷ್ಯ ನಿನ್ನಲ್ಲೇ ಇಟ್ಕೋ...

ಎಂದವಳೇ ಹೊರಟಳು. ಆ ಕ್ಷಣ ನಿರ್ಮಲಾ ಮುಖ ನೋಡಿದಾಗ ಮಾಲಿನಿಗೆ ಅವಳು ತನ್ನ ಮಾತುಗಳನ್ನು ನಂಬಿಲ್ಲ ಎನ್ನಿಸತೊಡಗಿತು.

******

ಅಂದಿನಿಂದ ಮಾಲಿನಿಗೆ ಏಕೋ ತಾನೇ ಬದಲಾದಂತೆ ಅನ್ನಿಸತೊಡಗಿತು. ಯಾರು ಹಬ್ಬಿಸಿರಬಹುದು ಇಂಥಾ ಕತೆಗಳನ್ನು. ಪಕ್ಕದ ಮನ ಪದ್ಮಾ ನಟರಾಜನ್? ಯಾವಾಗ ಕಾರಿನಲ್ಲಿ ತಿರುಗುವ ಮಿಸೆಸ್ ಸಿಂಗ್? ಮನೆಯಲ್ಲಿಯೂ ಲಿಪ್ಸ್ಟಿಕ್ ಹಚ್ಚೇ ಇರುವ ವಿನೋದಾ ಖಟ್ಟರ್? ಅಮಿತಾಭ್ ಚಿತ್ರಗಳನ್ನು ಬಾರಿ ಬಾರಿ ನೋಡುವ ರಾಜಿ! ಇಷ್ಟರ ಮೇಲೆ ಯಾರಾದರೇನು? ಅದರಿಂದ ತಾನೇಕೆ ಬೇಸರಪಟ್ಟುಕೊಳ್ಳಬೇಕು. ಸತ್ಯ ತನಗೆ ಗೊತ್ತು ಎಂದು ಎಷ್ಟು ಸಮಾಧಾನ ಮಾಡಿಕೊಂಡರೂ ಈ ಸುಳ್ಳನ್ನು ಹೇಗಾದರೂ ಬಯಲಿಗೆಳೆಯಬೇಕು ಎನ್ನಿಸಗೊಡಗಿತು. ತಾನು ಅವರೆಲ್ಲರ ಮನದಲ್ಲಿ ಮೂಡಿರುವ ರೀತಿ ಬೇಸರ ತುಂಬತೊಡಗಿತು.

********

ನಿರ್ಮಲಾ ಮಾರನೆಯ ದಿನವೇ ಡಾ. ತಲ್‌ವಾಲ್ಕರ್ ಹತ್ತಿರ ಹೋಗಿದ್ದಳು. ಅವರು ಅಳತೆ ತೆಗೆದುಕೊಂಡು, ಒಂದು ವಾರದಲ್ಲಿ ಇಂಪ್ಲಾಂಟ್ಸ್ ತಯಾರು ಮಾಡಿಸುವುದಾಗಿಯೂ, ಬಂದು ತೆಗೆದುಕೊಂಡು ಹೋಗಬೇಕೆಂದೂ ಹೇಳಿದರು. ನಿರ್ಮಲಾಗೆ ಸ್ವಲ್ಪ ಆಶ್ಚರ್ಯವೇ ಆಯಿತು.

"ಡಾಕ್ಟರ್, ತೆಗೆದುಕೊಂಡು ಹೋಗಿ ಅಂದ್ರೆ..."

"ಹೌದಮ್ಮ, ಅದು ರೆಡಿ ಆದ ತಕ್ಷಣ ನೀವು ತೆಗೆದುಕೊಂಡು ಹೋಗಿ ಇಟ್ಟುಕೊಳ್ಳಿ. ನೀವು ಆಪರೇಷನ್ ದಿನ ನಿಶ್ಚಯ ಮಾಡುತ್ತಲೂ ಬನ್ನಿ. ಇನ್ನೊಂದು ವಿಷಯ ನೀವು ಅಷ್ಟೂ ಹಣ ಅಡ್ವಾನ್ಸ್ ಆಗಿ ಕೊಡಬೇಕು... ಆಮೇಲೆ ನಾನು ಆರ್ಡರ್ ಪ್ಲೇಸ್ ಮಾಡ್ತೀನಿ..."

"ಈಗಲೇ ಎಲ್ಲಾ ಹಣಾನೂ..."

"ಹೌದು ಮಿಸೆಸ್ ಮೆನನ್. ನೋಡಿ ಮೊದಲೆಲ್ಲಾ ನಾನು ಈ ರೀತಿ ಅಡ್‌ವಾನ್ಸ್ ತಗೊಳ್ತಾ ಇರಲಿಲ್ಲ. ಆದ್ರೆ, ಎಷ್ಟೋ ಹೆಂಗಸರು ಆರ್ಡರ್ ಮಾಡಿ ಹೋಗೋರು. ಅಮೇಲೆ ಆಪರೇಷನ್ ಬೇಡಾಂತ ಮನಸ್ಸು ಬದಲಾಯಿಸೋರು. ನಂಗೆ ಎಷ್ಟು ಲಾಸ್ ನೋಡಿ.. ಸಾವಿರಾರು ರೂಪಾಯಿ, ಜೊತೆಗೆ ಅದನ್ನಿಟ್ಟುಕೊಂಡು ನಾನೇನು ಮಾಡಲಿ, ಬೇರೆಯವರಿಗೆ ಉಪಯೋಗಿಸುವ ಹಾಗೂ ಇಲ್ಲ..."

"ಸರಿ ಕೊಡ್ತೀನಿ..." ಎಂದು ನಿರ್ಮಲಾ ಬೇಗ ಬೇಗ ಒಪ್ಪಿಗೆ ಸೂಚಿಸಿದಳು. ಚೆಕ್ ಬರೆಯುತ್ತಿದ್ದಾಗ ನಿರ್ಮಲಾ ಅಧೀರಳಾದಳು. ಇಷ್ಟೊಂದು ಹಣ ತೆತ್ತ ಮೇಲೆ ಮನಸ್ಸು ಬದಲಾಯಿಸುವ ಹಾಗೂ ಇಲ್ಲ. ಗಂಡ ಏನೆಂದಾರು?

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.....

# ಬ್ರಾಹ್ಮಣತ್ವವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ?

Nesaru compilation

ರಾವಣ ಬಾಹ್ಮಣನಾಗಿದ್ದರೂ ಸಹ ರಾಕ್ಷಸನಾದ..!

ಶಬರಿ ಶೂದ್ರಳಾಗಿದ್ದರೂ ಸಹ ದೇವತೆಯಾದಳು

ಅರ್ಥ ಮಾಡಿಕೊಳ್ಳಬೇಕಾಗಿರುವುದು ಇಷ್ಟೇ..

ನಮ್ಮ ನಿಯತಿ ನಮ್ಮ ಕರ್ಮದ ಮೇಲೆ ಅವಲಂಬಿತವಾಗಿರುತ್ತದೆ, ಜಾತಿ ಅಥವಾ ಜನ್ಮದ ಮೇಲಲ್ಲ." {ಇದು ನನ್ನ ಗೆಳೆಯರೊಬ್ಬರ ವಾಟ್ಸಪ್ ಸ್ಟೇಟಸ್ ಅಲ್ಲಿತ್ತು.}

ವಿಷಯಕ್ಕೆ ಬರೋಣ.

ಸಹಜವಾಗಿ ಬಾಹ್ಮಣ ಕುಲವನ್ನು ಚತುರ್ವರ್ಣ ವ್ಯವಸ್ಥೆಯಲ್ಲಿ ಸೇರಿಸಿಬಿಡುತ್ತೇವೆ. ಆದ್ರೆ ನಿಜವಾಗಿ ಕೇವಲ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ಆತ ಬ್ರಾಹ್ಮಣನಾಗುವುದಿಲ್ಲ. ಬ್ರಹ್ಮಜ್ಞಾನವನ್ನು ಪಡೆದುಕೊಂಡವನೇ ನಿಜವಾದ ಬ್ರಾಹ್ಮಣ. ಬ್ರಹ್ಮಜ್ಞಾನದಲ್ಲಿ ಮೊದಲನೆಯದಾಗಿ, "ತಾವು ಯಾರು? ತಮ್ಮ ಹುಟ್ಟಿನ ಮೂಲಧ್ಯೇಯವೇನು?" ಎಂಬುದನ್ನು ಅರಿತುಕೊಳ್ಳುವುದೇ ಮೊದಲ ಜ್ಞಾನ.

ಮೊದಲು ಅವನಿಗೆ ದೇವರಲ್ಲಿ ನಂಬಿಕ ಇರಬೇಕು. ದೇವರೇ ದೊಡ್ಡವನು ಅನ್ನೋ ಅರಿವು ಇರಬೇಕು. (ನಾಸ್ತಿಕ ಬ್ರಾಹ್ಮಣನಲ್ಲ). ಸ್ನಾನ, ಸಂಧ್ಯಾವಂದನೆ ಮತ್ತು ದೇವರ ಪೂಜೆ ಅವನ ಧರ್ಮ ಮತ್ತು ನಿತ್ಯ ಕರ್ಮವಾಗಿರಬೇಕು. (ಇವತ್ತಿನ ಪರಿಸ್ಥಿತಿಯ ಅನುಗುಣವಾಗಿ ಕಾಲೇಜು-ಕೆಲಸ ಅಂತ ಬ್ರಾಹ್ಮಣನಿಗೂ ಅನಿವಾರ್ಯತೆ ಇದೆ. ಆದರೆ ಪುರ್ಸತ್ತು ಅಥವಾ ನಿವೃತ್ತಿ ಸಿಕ್ಕಾಗ ತನ್ನ ಧರ್ಮದ ಕಡೆ ಗಮನ ಹರಿಸಬೇಕು)

ಅವನು ಆದಷ್ಟು "ಅಹಿಂಸ ಪರಮೋ-ಧರ್ಮ" ವನ್ನು ಪಾಲಿಸಬೇಕು. ಜಿತೇಂದ್ರಿಯನಾಗಲು ಪ್ರಯತ್ನಿಸಬೇಕು (ಕಲಿ-ಯುಗದಲ್ಲಿ ಇದಕ್ಕೆ ವಿರುದ್ಧ ಸನ್ನಿವೇಶಗಳು ಅನೇಕ) ನಮ್ಮ ಗ್ರಂಥಗಳ ಅಧ್ಯಯನ ಮಾಡಬೇಕು, ಕಲಿಯಬೇಕು. ಇವು ಬ್ರಾಹ್ಮಣನ ಪ್ರಾಥಮಿಕ ಮೂಲ ಕರ್ತವ್ಯಗಳು. ಇದನ್ನೇ ದೀರ್ಘವಾಗಿ ಇನ್ನಷ್ಟು ಪರಿಶೀಲಿಸಿ ಕಲಿಯಲು ಸಾಧ್ಯತೆ ಇದೆ.

ನಾನು ಮೇಲೆ ಬರೆದಿರೋ ತತ್ತ್ವಶಾಸ್ತ್ರ ಸಮ್ಮತವಾದದ್ದು.

